

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 71 Thursday 21-11-2024 E-mail : maruti.b.hosamani76@gmail.com Page: 4 Price : Rs. 1/-


## ಕಿನ್ನಾಳ್‌ರಾಜ್‌ರ 'ಸಿಂಹರೂಪಿಣಿ' ನ.29ಕ್ಕೆ ಬಿಡುಗಡೆ




**ಸಿಹಿ ಕಹಿ ಸುದ್ದಿ,**

**ಹುಬ್ಬಳ್ಳಿ :** ಶ್ರೀ ಚಕ್ರ ಫಿಲಂಸ್ ಲಾಂಛನದಲ್ಲಿ ಭಕ್ತಿ ಪ್ರಧಾನ ಚಲನಚಿತ್ರ 'ಸಿಂಹರೂಪಿಣಿ' ಅದ್ದೂರಿ ಗ್ರಾಫಿಕ್ಸ್‌ನೊಂದಿಗೆ ತೆರೆಗೆ ಬಂದು ಈಗಾಗಲೇ ಬೆಂಗಳೂರಿನ ಸ್ವಪ್ನ ಚಿತ್ರಮಂದಿರದಲ್ಲಿ 25 ದಿನಗಳನ್ನು ಪೂರೈಸಿದೆ. ಸಧ್ಯ ಉತ್ತರ ಕರ್ನಾಟಕದ ಭಾಗದಲ್ಲಿ ಚಿತ್ರವನ್ನು ಇದೆ ನ.29 ರಿಂದ ಬಿಡುಗಡೆ ಮಾಡಲಾಗುತ್ತಿದೆ ಎಂದು ನಿರ್ದೇಶಕ ಕಿನ್ನಾಳರಾಜ್ ಹೇಳಿದರು.

ಅವರು ಪತ್ರಿಕಾ ಭವನದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ದೊಡ್ಡಬಳ್ಳಾಪೂರ ಸಮೀಪ ಚಿತ್ರೀಕರಣ ನಡೆಸಲಾಗಿದ್ದು ಮಾರಮ್ಮದೇವಿಗೆ ಬಲಿ ಕೊಡುವ ಕಥೆ ಇದಾಗಿದೆ. ಪಕ್ಕಾ ಕಮರ್ಷಿಯಲ್ ಅಂಶಗಳನ್ನು ಅಳವಡಿಸಿಕೊಳ್ಳಾಗಿದೆಯಲ್ಲದೆ ಉತ್ತರ ಕರ್ನಾಟಕದ ಭಾಷೆಯ ಸೊಗಡು ಎರಡನೆ ಭಾಗದಲ್ಲಿ ಕಟ್ಟಿಕೊಡಲಾಗಿದೆ. ಕೆಎಂ ನಂಜುಂಡೇಶ್ವರ ಅವರು ಕಥೆ ಬರೆದು ಚಿತ್ರ ನಿರ್ಮಾಣ ಮಾಡಿದ್ದಾರೆ. ಚಿತ್ರದಲ್ಲಿ ಯಶ್‌ಶೆಟ್ಟಿ , ಅಂಕಿತಾ ಗೌಡ , ಯಶಸ್ವಿನಿ ,ಪುನಿತ್ ರುದ್ರನಾಗ್, ದಿವ್ಯಾ ಆಲೂರು, ತೆಲುಗಿನ ಹಿರಿಯ ನಟರಾದ ಸುಮನ್. ತಮಿಳು ನಟ ದಿನಾ, ಹರೀಶ್ ರಾಯ್, ನೀನಾಸಂ ಅಶ್ವಥ್, ತಬಲಾ ನಾಣಿ, ದಿನೇಶ್ ಮಂಗಳೂರು, ಭಜರಂಗಿ ಪ್ರಸನ್ನ, ಅವರಂತ ಪ್ಯಾನ್ ಇಂಡಿಯ ಕಲಾವಿದರ ಜೊತೆ ಸಾಗರ್, ವಿಜಯ್ ಚಂಡೂರ್, ವರ್ಧನ್ ತೀರ್ಥಹಳ್ಳಿ, ಮನಮೋಹನ ರೈ. ನವಾಜ್. ಲೋಹಿತ್. ಪಿಳ್ಳಪ್ಪ. ವಿಜಯ್ ಬಸ್ರೂರು, ಸುನಂದಾ ಕಲ್ಬುರ್ಗಿ, ವೇದಾ ಹಾಸನ್, ಶಶಿಕುಮಾರ, ಜೊತೆಗೆ ಇನ್ನೂ 45ಕ್ಕೂ ಹೆಚ್ಚಿನ ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ. ಹುಬ್ಬಳ್ಳಿ, ಗದಗ ಬೆಟಗೇರಿಯ ಬಾಲಪ್ರತಿಭೆ ಸಾಯಿಸಮೀಕ್ಷಾ, ಇಳಕಲ್ ಪ್ರತಿಭೆ ಮಲ್ಲಿಕಾರ್ಜುನ ಅವರೂ ಚಿತ್ರದಲ್ಲಿದ್ದು , ನ.29ಕ್ಕೆ ಚಿತ್ರತಂಡದ ಕಲಾವಿದರೂ,ತಂತ್ರಜ್ಞರು ಹುಬ್ಬಳ್ಳಿ ,ಗದಗ, ಮುಂಡರಗಿ ಚಿತ್ರಮಂದಿರಕ್ಕೆ ಭೇಟಿನೀಡಿ ಪ್ರೇಕ್ಷಕರ ಜೊತೆ ಮಾತುಕತೆ ನಡೆಸಲಿದೆ. ಉತ್ತರ ಕರ್ನಾಟಕದ ಜನ ಸಿನೇಮಾ ನೋಡಿ ಪ್ರೋತ್ಸಾಹಿಸಬೇಕು ಎಂದರು.

ಸಂಗೀತ ಆಕಾಶ ಪರ್ವ. ಛಾಯಾಗ್ರಹಣ ಕಿರಣ್ ಕುಮಾರ್, ಸಂಕಲನ ವೆಂಕಿ ಯು ಡಿ ವಿ , ಪಿ.ಆರ್.ಓ ಆರ್ ಚಂದ್ರಶೇಖರ್, ಡಾ.ಪ್ರಭು ಗಂಜಿಹಾಳ್. ಡಾ.ವೀರೇಶ್ ಹಂಡಿಗಿ ಅವರದ್ದಾಗಿದೆ. ಎಕ್ಸಿಕ್ಯೂಟಿವ್ ಪ್ರೊಡ್ಯೂಸರ್ ಆಗಿ ಬಾಲಸುಬ್ರಹ್ಮಣ್ಯಂ ಕಾರ್ಯ ನಿರ್ವಹಿಸಿದ್ದಾರೆ. ರಾಜಶೇಖರ್ .ಮಲ್ಲಿಕ್. ನಿತ್ಯ ದಿನೇಶ್. ತೇಜಸ್ ನಿರ್ದೇಶನ ತಂಡದಲ್ಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕರ ಸೋದರ ಚಂದ್ರಶೇಖರ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ, ಮಲ್ಲಿಕಾರ್ಜುನ, ಸಾಯಿಸಮೀಕ್ಷಾ ಚಿತ್ರ ತಂಡದ ಸದಸ್ಯರು ಇದ್ದರು.

**ವರದಿ: ಡಾ.ಪ್ರಭು ಗಂಜಿಹಾಳ**
**ಮೊ: 9448775346**

## ಶೌಚಾಲಯ ಸ್ವಚ್ಛತೆ,ದೇಶದ ಸ್ವಚ್ಛತೆ: ಡಾ. ದೇವರಾಜ್

**ತರೀಕೆರೆ :** ಅಸಹ್ಯ ಪಡೆದೆ ಸ್ವಚ್ಛತೆ ಕೆಲಸ ಮಾಡುವ ಕೆಲಸಗಾರರಿಗೆ ಸನ್ಮಾನಿಸಿ ಗೌರವಿಸುವದು ಪ್ರತಿಯೊಬ್ಬ ನಾಗರೀಕನ ಕರ್ತವ್ಯ ಎಂದು ಡಾ, ದೇವರಾಜ್ ಹೇಳಿದರು. ಅವರು ಇಂದು ಸಂಜೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ವಿಶ್ವ ಶೌಚಾಲಯ ದಿನಾಚರಣೆಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರತಿ ಶೋಷಣೆಯ ವಿರುದ್ಧ ಹೋರಾಡಲು ಡಿ.ಎಸ್.ಎಸ್ ವೆಂಕಟೇಶ್ ಇರುತ್ತಾರೆ ಇವರು ಜನರಲ್ಲಿ ಸಾಮಾಜಿಕವಾಗಿ ಸ್ವಚ್ಛತೆ ಕುರಿತು ಅರಿವು ಮೂಡಿಸುತ್ತಿದ್ದಾರೆ ಸ್ವಚ್ಛತೆಯ ಕೆಲಸ ಗೌರವಯುತವಾದದ್ದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಜಿಲ್ಲಾ ಮ್ಯಾನುವಲ್ ಸ್ಕ್ಯವೆಂಜರ್ಸ್ ಮತ್ತು ಸಪಾಯಿ




ಕರ್ಮಚಾರಿಗಳ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರಾದ ತರೀಕೆರೆ ಎನ್.ವೆಂಕಟೇಶ್ ಮಾತನಾಡುತ್ತಾ ಸೌಚಾಲಯವನ್ನು ಬಳಸಿ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ, ಸ್ವಚ್ಛತಾ ಕೆಲಸ ಮಾಡುವವರು ಸಮಾಜದ ಸಮುದಾಯದ ಆರೋಗ್ಯ ಕಾಪಾಡುತ್ತಿದ್ದಾರೆ ಅವರಿಗೆ ಅವರ ವೃತ್ತಿಗೆ ಗೌರವಿಸಬೇಕು. ಸರ್ಕಾರವು ಸಪಾಯಿ ಕರ್ಮಚಾರಿಗಳ ಮತ್ತು ಮಾನ್ಯುಯಲ್ ಸ್ಕ್ಯಾವೆಂಜರ್ ಗಳು ಅಭಿವೃದ್ಧಿಗೆ ಪುನರ್ವಸತಿ ಕಲ್ಪಿಸಲು ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಕಿ ಕೊಂಡಿದೆ ಈ ಸವಲತ್ತುಗಳನ್ನು ಪಡೆದು ಆರ್ಥಿಕವಾಗಿ ಸದೃಢರಾಗಿ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣದೊಂದಿಗೆ ಉನ್ನತ ಸ್ಥಾನಮಾನ ಕಲ್ಪಿಸಬೇಕು ಎಂದು ಹೇಳಿದರು. ಡಾ, ನಾಗರಾಜ್, ಡಾ, ಸಂತೋಷ್ ಕುಮಾರ್, ಡಾ, ಭಾಗ್ಯಲಕ್ಷ್ಮಿ , ಉಪಸ್ಥಿತರಿದ್ದು. ನರ್ಸಿಂಗ್ ಸೂಪರ್ವೈಸರ್ ಶೇಶಮ್ಮ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಸ್ವಚ್ಛತೆ ಕೆಲಸ ಮಾಡುವ ನೌಕರರನ್ನು ವೈದ್ಯಾಧಿಕಾರಿ ಡಾ, ದೇವರಾಜ್ ಸನ್ಮಾನಿಸಿ ಗೌರವಿಸಿದರು. ವಿಜಯಮ್ಮ ಪ್ರಾರ್ಥಿಸಿ, ಆಯುಷ್ಯ ಡಾ, ಶ್ರೀನಿವಾಸ್ ರವರು ಸ್ವಾಗತಿಸಿ ವಂದಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್. ತರೀಕೆರೆ.ಚಿಕ್ಕಮಗಳೂರು.**

## ಮನೆ ಮನೆ ನಳ ಸಂಪರ್ಕ ಯೋಜನೆಯ ಕಾಮಗಾರಿ ಭೂಮಿ ಪೂಜೆ ನೆರವೇರಿಸಿದ ಶಾಸಕರು

ಸಿಹಿ ಕಹಿ ಸುದ್ದಿ,

ಬನ್ನಿಹಟ್ಟಿ : ತಾಳಿಕೋಟೆ ತಾಲೂಕಿನ ಬನ್ನಿಹಟ್ಟಿ ಪಿ.ಟಿ. ಗ್ರಾಮದಲ್ಲಿ. ಗ್ರಾಮೀಣ ಕುಡಿಯುವ ನೀರಿ ನೈರ್ಮಲ್ಯ ಉಪ ವಿಭಾಗ ಸಿಂದಗಿ 2024/2025 ನೇ. ಸಾಲಿನ ಜಲಜೀವನ ಮಿಷನ್ ಯೋಜನೆ ಅಡಿಯಲ್ಲಿ.ಬನ್ನಿಹಟ್ಟಿ ಪಿ.ಟಿ ಗ್ರಾಮದಲ್ಲಿ ಮನೆ ಮನೆ ನಳ ಸಂಪರ್ಕ ಯೋಜನೆ ಅಂದಾಜು ಮೊಂತ್ತ ,84.29.ಲಕ್ಷ. ಕಾಮಗಾರಿ. ಭೂಮಿ ಪೂಜೆ ಸಮಾರಂಭ ನೆರವೇರಿತು. ದೇವರ ಹಿಪ್ಪರಗಿಯ ಮತಕ್ಷೇತ್ರದ ಜನಪ್ರಿಯ ಶಾಸಕರಾದ ರಾಜು ಗೌಡ ಪಾಟೀಲ್ . ಇವರು ಈ ಸಂದರ್ಭದಲ್ಲಿ ನಿಮ್ಮ ಗ್ರಾಮದಲ್ಲಿ ಯಾವುದೇ ಕೆಲಸಗಳು ಇದ್ದರೆ ಚಾಚು ತಪ್ಪದೇ ಸರಕಾರ ದಿಂದ ಅನುದಾನ ತಂದು ನಿಮ್ಮ ಕೆಲಸಗಳನ್ನು ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು. ಕಲಕೇರಿ ಟು ಆಸ್ಕಿ ರಸ್ತೆ ದುರಸ್ತಿ ಮಾಡುತ್ತೇನೆ



ಎಂದು ಶಾಸಕರು ತಿಳಿಸಿದರು. ಯಮನೂರಿ ಸಿಂದಗಿರಿ ಇವರು ಎಸ್.ಡಿ.ಎಮ್.ಸಿ ಯ ಅಧ್ಯಕ್ಷರು ನಮ್ಮ ಗ್ರಾಮಗಳಲ್ಲಿ ಶಾಸಕರು ನಾವು ಯಾವುದೇ ಕೆಲಸಗಳನ್ನು ಕೇಳಿದರೆ ಚಾಚು ತಪ್ಪದೇ ಸರಕಾರ ದಿಂದ ನಮ್ಮ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆಯ ಇರಬಹುದು ಅನೇಕ ರಸ್ತೆಗಳ ದುರಸ್ತಿ ಇರಬಹುದು ಎಲ್ಲಾ ಕೆಲಸಗಳನ್ನು ಶಾಸಕರು ನಮ್ಮ ಗ್ರಾಮಕ್ಕೆ ಮಾಡಿದ್ದಾರೆ ಎಂದು ತಿಳಿಸಿದರು.

ರವೀಂದ್ರ ಸುಧಾಕರ್ ಗ್ರಾಮ ಪಂಚಾಯಿತಿಯ ಅಧ್ಯಕ್ಷರು. ಬಸನಗೌಡ ಪಾಟೀಲ್ ನಿವೃತ್ತಿ ಶಿಕ್ಷಕರು. ಶರಣು ಕುಂಬಾರ್. ಲಕ್ಷ್ಮಣ ಮಾದರ್. ಅಪ್ಪು ಗೌಡ ಪಾಟೀಲ್. ರಾಜಬಕ್ಷರ ತಾಳಿಕೋಟಿ. ಯಮನೂರಿ ಸಿಂದಿಗೇರಿ ಎಸ್.ಡಿ.ಎಂ.ಸಿ ಅಧ್ಯಕ್ಷರು. ಕಾಸಿಂಸಾಬ್ ನಾಯ್ಕೋಡಿ. ಇರಗಂಟಿ ಬಡಿಗೇರ್. ಸುನಿಲ್ ಪಾಟೀಲ್. ಶಿವಶಂಕರ ಟಕ್ಕಳಕಿ. ಇನ್ನೂ ಅನೇಕರು ಜೆಡಿಎಸ್ ಕಾರ್ಯಕರ್ತರು ಊರಿನ ಗ್ರಾಮಸ್ಥರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ.ತಾಳಿಕೋಟೆ**

## ಪತಿ ಸ್ಥಾನಕ್ಕೆ ಪತ್ನಿ–ಮಗನಿಂದ ನಾಮಪತ್ರ..!

**ರಬಕವಿ–ಬನಹಟ್ಟಿ :** ವಿಧಾನಸಭೆ, ಲೋಕಸಭೆಗಿಂತಲೂ ಗ್ರಾಮ ಪಂಚಾಯಿತಿ ಚುನಾವಣೆಗಳು ವಿಶೇಷ ರಂಗೇರುವಲ್ಲಿ ಕಾರಣವಾಗಿವೆ.

ತಾಲೂಕಿನ ಆಸಂಗಿ ಗ್ರಾಮ ಪಂಚಾಯಿತಿಯ ವಾರ್ಡ ನಂ. 3 ರ ಮೀಸಲು ಸ್ಥಾನಕ್ಕೆ ಸದಸ್ಯರಾಗಿದ್ದ ತಿಪ್ಪಣ್ಣ ಸಣ್ಣಕ್ಕಿ ನಿಧನರಾದ ಕಾರಣ ಉಪಚುನಾವಣೆಯು ನವೆಂಬರ 23 ರಂದು ನಡೆಯಲಿದೆ.

ಒಂದು ಸ್ಥಾನಕ್ಕೆ ಒಟ್ಟು ನಾಲ್ಕು ನಾಮಪತ್ರಗಳು ಸಲ್ಲಿಕೆಯಾಗಿದ್ದು,

ಈ ಹಿಂದಿನ ಸದಸ್ಯ ದಿವಂಗತ ತಿಪ್ಪಣ್ಣ ಸಣ್ಣಕ್ಕಿಯವರ ಪತ್ನಿ ರುಕ್ಮವ್ವ ಹಾಗು ಪುತ್ರ ಅಶೋಕ ನಾಮಪತ್ರ ಸಲ್ಲಿಸುವ ಮೂಲಕ ಎಲ್ಲರ ಗಮನ ಸೆಳೆಯುವಲ್ಲಿ ಕಾರಣವಾಗಿದ್ದರೆ, ಇನ್ನಿಬ್ಬರು ಅಶೋಕ ಯಮನಪ್ಪ ಸಣ್ಣಕ್ಕಿ ಹಾಗು ಜಗದೀಶ ದೊಡಮನಿಯವರ ನಾಮಪತ್ರ ಸಲ್ಲಿಕೆಯಾಗಿದೆ.



**ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ ವಿಧಾನಸಭೆ ಕ್ಷೇತ್ರದ ಸಂಕ್ ಗ್ರಾಮದಲ್ಲಿ ಇಂದು ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ನೆರೆದಿದ್ದ ಸಹಸ್ರಾರು ಮಂದಿಯನ್ನು ಉದ್ದೇಶಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾ ವಿಕಾಸ ಅಘಾದ ಅಭ್ಯರ್ಥಿಗಳ ಗೆಲುವಿಗೆ ಕರೆ ನೀಡಿದರು.**

## ಹೃದಯದಿಂದ ಶ್ರೀಮಂತಿಕೆ ಇರುವ ವ್ಯಕ್ತಿ ದೊಡ್ಡವನು: ರುದ್ರಮುನಿ ಶಿವಾಚಾರ್ಯ ಶ್ರೀಗಳು

**ಬಾಗಲಕೋಟೆ (ಬೀಳಗಿ) :** ತಾಲೂಕಿನ ಗಿರಿಸಾಗರ ಗ್ರಾಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಪ್ರಧಾನ ಸಮಾರಂಭ ಜರುಗಿತು.

ಗ್ರಾಮದ ಶ್ರೀನೀಲಕಂಠೇಶ್ವರ ರಂಗಮಂದಿರದಲ್ಲಿ ಆಯೋಜಿಸಿದ ಕಾರ್ಯಕ್ರಮಕ್ಕೆ ಬಿಜೆಪಿ ಓಬಿಸಿ ಘಟಕದ ಜಿಲ್ಲಾಧ್ಯಕ್ಷ ವೀರಣ್ಣ ಹಳೆಗೌಡರ ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು,ಜಿಲ್ಲೆಯಲ್ಲಿ ಸಂಗೊಳ್ಳಿ ರಾಯಣ್ಣ ಸಂಘಟನೆಯನ್ನು ಹುಟ್ಟು ಹಾಕಿದ್ದು ಶೇಖರ್ ಕಾಖಂಡಿಕಿಂಮವರು,2009 –10 ಸಂಗೊಳ್ಳಿ ರಾಯಣ್ಣನ ಫೋಟೋ ಹುಡಿಕಿದರು ಕಾಣುತ್ತಿರಲಿಲ್ಲ, ಇವತ್ತು ಪ್ರತಿಯೊಂದು ಕಡೆಗೆ ರಾಯಣ್ಣನ ಭಾವಚಿತ್ರ ಹಾಗೂ ಮೂರ್ತಿ ಪ್ರತಿಷ್ಠಾಪನೆ ಆಗಿದೆ ಅಂದರೆ ಶೇಖರ್ ಕಾಖಂಡಿಕಿ,ಇವತ್ತಿ ರಾಜಕೀಯ ಹದಗೆಟ್ಟಿದೆ,ಸಾಮಾಜಿಕ ಪೌರಾಣಿಕ ನಾಟಕ,ಚಲನಚಿತ್ರ ಮರೆಯಾಗಿ,ಮೊಬೈಲ್ ನಲ್ಲಿ ರಿಲ್ಸ್ ಮಾಡುವ ಹುಚ್ಚುತನವೆ ಇವತ್ತಿನ ಯುವ ಪೀಳಿಗೆಯ ಸಾಧನೆ ಆಗಿದೆ, ಸಂಘಟನೆ ಮಾಡಿ ಮುಂದುವರೆಸಿಕೊಂಡು ಹೋಗುವುದು ಅಷ್ಟು ಸುಲಭವಲ್ಲ,ಇವತ್ತು ಸಂಗೊಳ್ಳಿ ರಾಯಣ್ಣ 11 ನೇ ವಾರ್ಷಿಕೋತ್ಸವದ



ಅಂಗವಾಗಿ ಸಂಗೊಳ್ಳಿ ರಾಯಣ್ಣ ಗ್ರಾಮೀಣಾಭಿರುದ್ಧಿ ಸಂಸ್ಥೆ ಹಾಗೂ ನವಚೇತನ ಚಾರಿಟೇಬಲ್ ಟ್ರೇಸ್ಟ್ ರಾಮನಗರ ಇವರು ಆಶ್ರೇಯದಲ್ಲಿ ಗಿರಿಸಾಗರದ ಸರಕಾರಿ ಹಾಗೂ ಖಾಸಗಿ ಶಾಲೆಯ ಮಕ್ಕಳಿಗೆ ನೋಟ್ ಬುಕ್ ವಿತರಿಸಿ ನಂತರ ತಾಲೂಕಿನ ಎಸ್ ಎಸ್ ಎಲ್ ಸಿ & ಪಿ ಯು ಸಿಯಲ್ಲಿ 75% ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಕಲೆ,ಸಾಹಿತ್ಯ,ಸಂಗೀತ,ಶಿಕ್ಷಣ,ಪತ್ರಿಕೋಧ್ಯಮನ್ಯಾಯಾಂಗ,ಯೋಗ,ಇಂಜಿನಿಯರ್ (ಅಭಿಯಂತರರು),ಕೃಷಿ, ವೈದ್ಯಕಿ ಹಾಗೂ ಸಾರಿಗೆ ಮತ್ತು ಕ್ರೀಡಾ (ವಿಶೇಷ ಚೇತನರರು)ಕ್ಷೇತ್ರದಲ್ಲಿ ಹೀಗೆ ಸುಮಾರು 35 ಕ್ಕಿಂತ ಹೆಚ್ಚು ಸಾಧಕರಿಗೆ ರಾಯಣ್ಣ ಪ್ರಶಸ್ತಿ ಪ್ರಧಾನ ಮಾಡಿದ ಶೇಖರ್ ಕಾಖಂಡಕಿ ಇವರಿಗೆ ಎಷ್ಟು ಅಭಿನಂದನೆ ಹೇಳಿದರು ಕಡಿಮೆ ನಿಮ್ಮ ಸೇವೆ ಹೀಗೆ ಮುಂದುವರೆಯಲಿ ಎಂದು ಆಶಿಸಿದರು, ಕುಡು ಬಡತನದಲ್ಲಿ ಹುಟ್ಟಿದ ಶೇಖರ ಅವರು,ಸಂಗೊಳ್ಳಿ ರಾಯಣ್ಣ ಈ ದೇಶ ಸ್ವಾತಂತ್ರದ ಕಿಚ್ಚು ಹಚ್ಚಿ ವ್ಯಕ್ತಿ,34 ವರ್ಷ ಬಾಳಿ ಬದುಕಿದ ವ್ಯಕ್ತಿ ಆದರ್ಶವನ್ನ ಇಟ್ಟುಕೊಂಡು ರಾಯಣ್ಣ ಸಂಘವನ್ನು ಕಟ್ಟಿಕೊಂಡು ಸಾಧಕರನ್ನ,ಮಕ್ಕಳುನ್ನ ಗೌರವಿಸಿ ಪ್ರೋತ್ಸಾಹದಾಹಕರಾಗಿದ್ದಾರೆ, ಸಾಕಷ್ಟು ಜನ ಕೋಟ್ಯಧಿಪತಿಗಳು ಇದ್ದಾರೆ,ಸಾಮಾನ್ಯ ಕುಟುಂಬದಲ್ಲಿ ಜನಿಸಿದ ವ್ಯಕ್ತಿ ಶೇಖರ ಅವರು ಸಾಧಕರನ್ನ ಪ್ರೋತ್ಸಾಹಿಸಿದ್ದು ಮಾತ್ರ ಸಾಧನೆಗೆ ಸಹಕಾರ ನೀಡಿದಂತಾಗಿದೆ ಎಂದು ರುದ್ರಮುನಿ ಶಿವಾಚಾರ್ಯ ಶ್ರೀಗಳು ಹೇಳಿದರು.

ಈ ಸಂದರ್ಭದಲ್ಲಿ ಲಕ್ಷ್ಮಣ ಶರಣು ಸುರುಗಿರಿ ಬೆಟ್ಟ ಕುಂದರಗಿ, ಗ್ರಾಂ.ಪಂ. ಅಧ್ಯಕ್ಷರು ಶಾಂತಾ ಬಂಡಿವಡ್ಡಿರ,ಡಾ. ಜಲಾಲ್ಲುದ್ದಿನ್ ಅಕ್ಬರ್ ವೆಂಕಟೇಶ್ ಜೂಲಿಕಟ್ಟಿ,ಶರಣು ಹಿರೇಮಠ್,ಗುರು ಅನಗವಾಡಿ,ಹಣಮಂತ ಜಲ್ಲಿ,ಶ್ರೀಕಾಂತ ಸಂದಿಮನಿ,ಭೀಮಪ್ಪ ಹರದೊಳ್ಳಿ,ಯಲ್ಲಪ್ಪ ಹೊನ್ನಿಹಾಳ, ಸಿದ್ದಾರೋಡ ಕೊಪ್ಪಳ, ಶ್ರೀಶೈಲ್ ಹೊನ್ನಿಹಾಳ,ಶರಣ ಬಡ್ಡಿ,ಶೇಖಪ್ಪ ಅರಮನೆ,ರಾಜು ತೇರದಾಳ,ಉಮೇಶ್ ಚೆನ್ನಿ,ಸಂಗಪ್ಪ ಅನಗಸರ,ಯಂಕಪ್ಪ ಮಾದರ,ಕಾವ್ಯಾ ಛಬ್ಬಿ, ಪವಿತಾ ಜಕ್ಕಪನ್ನವರ,ನಿರೂಪಣೆ ಬಸವರಾಜ್ ದಾವಣಗೆರೆ, ಆನಂದ ಬೊಮ್ಮನವರ ಸ್ವಾಗತಿಸಿದರು,ಎಸ್ ಎಸ್ ಹದಗಲ್ಲ.ಉಪಸ್ಥಿತರಿದ್ದರು.

### ಶಿರೂರು ಪಟ್ಟಣದಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಥಮ ಮಹಿಳೆ ಕಿತ್ತೂರು ಚನ್ನಮ್ಮಳ ವಿಜಯೋತ್ಸವ ಸಮಾರಂಭ

## ಕಿತ್ತೂರು ಉತ್ಸವ 'ರಾಷ್ಟ್ರಿಯ ಕಿತ್ತೂರು ಉತ್ಸವ'ವಾಗಿ ಆಚರಿಸಬೇಕು: ಡಾ. ಚಂದ್ರಶೇಖರ ಕಾಳನ್ನವರ

**ಬಾಗಲಕೊಟೆ/ಶಿರೂರು :** ಸ್ವಾತಂತ್ರಕ್ಕಾಗಿ ಬ್ರೀಟಿಷರ್ ಸೈನ್ಯದ ವಿರುದ್ಧ ಹೋರಾಡಿದ ಭಾರತದ ಪ್ರಥಮ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ಚನ್ನಮ್ಮ ನಾಡು ಹಾಗೂ ದೇಶದಲ್ಲಿ ಮನೆಮಾತಾಗಿದ್ದಾಳೆ.

ಕಿತ್ತೂರು ಚನ್ನಮ್ಮ ಸಮಸ್ತ ಭಾರತೀಯರಿಗೆ ಸ್ಫೂರ್ತಿಯಾಗಿದ್ದು, ಈಗ ನಡೆಯುವ ಕಿತ್ತೂರು ಉತ್ಸವವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜೊತೆಯಾಗಿ ರಾಷ್ಟ್ರೀಯ ಕಿತ್ತೂರು ಉತ್ಸವವನ್ನಾಗಿ ಆಚರಿಸಬೇಕು ಎಂದು ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಹೇಳಿದರು.

ಅವರು ಶಿರೂರು ಪಟ್ಟಣದಲ್ಲಿ ಭಾನುವಾರ ನಡೆದ ವೀರಶೈವ ಲಿಂಗಾಯತ ಪಂಚಮಸಾಲಿ ಬಣಜಿಗರಕ್ಷೇಮಾಭಿವೃದ್ಧಿಸಂಘದವತಿಯಿಂದ ಟಿ.ಎಂ.ಭಗವತಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ವೀರರಾಣಿ ಕಿತ್ತೂರು ಚನ್ನಮ್ಮಾಜಿಯ 200 ನೇ ವಿಜಯೋತ್ಸವದ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ, ಮಾತನಾಡಿದರು.

ಮುಂದುವರಿದು ಮಾತನಾಡಿ ಕಿತ್ತೂರು ರಾಣಿ ಚನ್ನಮ್ಮನ ವೀರಗಾಥೆ ಜೀವನವನ್ನು ಕನ್ನಡ ಜಾನಪದರು, ಲಾವಣಿಕಾರರು ಪದಗಳನ್ನು ರಚಿಸಿ, ಹೃದಯ ತುಂಬಿ ಹಾಡಿದ್ದಾರೆ. ಬ್ರೀಟಿಷರಿಗೆ ಸಿಂಹಸ್ವಪ್ನವಾಗಿದ್ದ ಕಿತ್ತೂರು ರಾಜಮನೆತನದ ವೀರಮಾತೆ ಚನ್ನಮ್ಮಳ ಸಾಹಸ, ಕೀರ್ತಿ, ಧೈರ್ಯ ಶೌರ್ಯ ನಮ್ಮ ಭಾರತೀಯ ಮಹಿಳೆಯರಿಗೆ ಇಂದಿಗೂ ಸ್ಫೂರ್ತಿಯಾಗಿದ್ದಾಳೆ.

ಹುನಗುಂದಶಾಸಕುವಿಜಯಾನಂದಕಾಶಪ್ಪನವರ



ಅವರು ಚನ್ನಮ್ಮಾಜಿ ವಿಜಯೋತ್ಸವದ ನೀರುಣಿಸುವ ಮೂಲಕ ಉದ್ಘಾಟಿಸಿ ಉಪನ್ಯಾಸ ಕಾರ್ಯಕ್ರಮವನ್ನು ಸಸಿಗೆ ಮಾತನಾಡಿ, ಕಿತ್ತೂರು ಚನ್ನಮ್ಮಳ ಸ್ವಾತಂತ್ರ್ಯ ಹೋರಾಟದ ಕೀರ್ತಿ ಭಾರತ ದೇಶವನ್ನೆ ಬೆಳಗಿದೆ. ಸ್ವಾತಂತ್ರ್ಯ ಹೋರಾಟದ ಪ್ರಥಮ ಮಹಿಳೆಯಾಗಿ ಇಂದಿನ ಭಾರತೀಯ ಮಹಿಳೆಯರಿಗೆ ಮಾದರಿಯಾಗಿದ್ದಾಳೆ ಎಂದರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ತು ಸದಸ್ಯ ಪಿ.ಹೆಚ್.ಪೂಜಾರ ಅವರು ಮಾತನಾಡಿ, ಕಿತ್ತೂರಿನ ವೀರರಾಣಿ ಚನ್ನಮ್ಮನ ಸ್ವಾತಂತ್ರ್ಯದ ಹೋರಾಟ, ಬ್ರೀಟೀಷರ್ ವಿರುದ್ಧದ ವಿಜಯವನ್ನು ಸಾಧಿಸಿದ ಸಾಹಸವನ್ನು ನಾವೆಲ್ಲರೂ ಸದಾ ಸ್ಮರಿಸಬೇಕು ಎಂದರು. ಆರ್.ಸಿ.ಚಿತ್ತವಾಡಿಗಿ ಅವರ ರಚಿಸಿದ 'ದಾನಿಯೊಳಗೆ ಮಹಾದಾನಿ' ಎಂಬ ಪುಸ್ತಕ ಕುರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರು ಮಾತನಾಡಿದರು.

ವೀರಶೈವ ಲಿಂಗಾಯತ ಪಂಚಮಸಾಲಿ ಬಣಜಿಗರ ಸಂಘದ ಅಧ್ಯಕ್ಷರಾದ ಬಿ.ಎಲ್. ಮೆಣಸಗಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ನ್ಯಾಯವಾದಿಗಳಾದ ಸಿ.ವಿ.ಕೋಟಿ, ಲಿಂಗರಾಜ ವಾಲಿ, ಎಸ್.ಆಯ್.ಕರಿಶಂಕರಿ, ರಾಮಣ್ಣ ಜುಮನಾಳ, ಜಿ.ಎಂ.ಸಿಂಧೂರ, ಎಸ್.ಎ.ಮೇಳಿ, ಎಸ್.ಎಸ್.ಕಲಗುಡಿ, ಸಿದ್ಧಪ್ಪ ಮೇಳಿ, ರಾಜಶೇಖರ ಅಂಗಡಿ, ರಾಜು ಚಿತ್ತವಾಡಿಗಿ, ಎಸ್.ಆರ್.ಪಟ್ಟಣಶೆಟ್ಟರ, ಕಲ್ಲಪ್ಪ ಭಗವತಿ ಸಿದ್ಧಲಿಂಗಪ್ಪ ಪಟ್ಟಣಶೆಟ್ಟಿ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಸಮಾಜದ ಸಾಧಕರಿಗೆ, ವೈದ್ಯಕೀಯ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

# ಕೆಎಲ್‌ಇ ಸಂಸ್ಥೆಯ 109ನೇ ಸಂಸ್ಥಾಪನಾ ದಿನಾಚರಣೆ



**ಮಹಾಲಿಂಗಪುರ :** ಕೆಎಲ್‌ಇ ಸಂಸ್ಥೆಯು ಒಂದು ದೊಡ್ಡ ಹೆಮ್ಮರವಿದ್ದಂತೆ, ಉತ್ತರ ಕರ್ನಾಟಕದಲ್ಲಿ ಕನ್ನಡದ ಹಿರಿಮೆ, ಕನ್ನಡ ಸಂಸ್ಕೃತಿ ಹಾಗೂ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಕರ್ನಾಟಕ ಲಿಂಗಾಯತ ಸಂಸ್ಥೆ ಸ್ಥಾಪಿಸಲಾಯಿತು ಎಂದು ಸುವರ್ಣ ಕರ್ನಾಟಕ ಸಾಧಕರು ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಮಲ್ಲಿಕಾರ್ಜುನ ಹೆಗ್ಗಳಗಿ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಮಹಾವಿದ್ಯಾಲಯದಲ್ಲಿ ಕೆಎಲ್‌ಇ ಸಂಸ್ಥೆಯ ಅಂಗ ಸಂಸ್ಥೆಗಳು ಆಯೋಜಿಸಿದ್ದ ಕೆಎಲ್‌ಇ ಸಂಸ್ಥೆಯ 109 ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಬದುಕಿನ ಮೌಲ್ಯಗಳಗಳನ್ನು ಅರಿತು ಮೂಢನಂಬಿಕೆಗಳಿಗೆ ಬಲಿಯಾಗದೆ ವೈಜ್ಞಾನಿಕ ಮನೋಭಾವಣೆಯನ್ನು ಬೆಳಿಸಿಕೊಳ್ಳಬೇಕು ಎಂದರು.

ಪದವಿ ಕಾಲೇಜಿನ ಪ್ರಾಚಾರ್ಯ ಡಾ.ಕೆ.ಎಂ.ಅವರಾದಿ ಅಧ್ಯಕ್ಷತೆವಹಿಸಿ ಮಾತನಾಡಿ ಏಳು ದಾರ್ಶನಿಕ ಶಿಕ್ಷಕರು ಮತ್ತು ಮೂರು ಸಹೃದಯ ಪೋಷಕರು 1916ರಲ್ಲಿ ಕೆಎಲ್‌ಇ ಸಂಸ್ಥೆಯನ್ನು ಶಿಕ್ಷಣದ ಮೂಲಕ ಸಬಲೀಕರಣವನ್ನು ಸುಗಮಗೊಳಿಸಲು ಒಂದೇ ಮನಸ್ಸಿನಿಂದ ಮತ್ತು ದೃಡವಾದ ಬದ್ದತೆಯಿಂದ ಸ್ಥಾಪಿಸಿದರು. ಸಂಸ್ಥೆಯು ಶಿಕ್ಷಣ, ಆರೋಗ್ಯ, ರಕ್ಷಣೆ, ಸಂಶೋದನೆ ಮತ್ತು ಕೃಷಿಯಲ್ಲಿ ಸೇವೆಗಳನ್ನು ಒದಗಿಸುವಲ್ಲಿ 310 ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಬಹುಮುಖಿ ವ್ಯಕ್ತಿತ್ವದ ಡಾ. ಪ್ರಭಾಕರ ಕೋರೆಯವರು ತಮ್ಮ ಅಪರೂಪದ ದಾರ್ಶನಿಕರೊಂದಿಗೆ 21ನೇ ಶತಮಾನಕ್ಕೆ ಕೆಎಲ್‌ಇ ಸಂಸ್ಥೆಯನ್ನು ಮರುವ್ಯಾಖ್ಯಾನಿಸಿ ಮರು ವಿನ್ಯಾಸಗೊಳಿದ್ದಾರೆ. ಮತ್ತು ನಿಪುಣ ಶಿಕ್ಷಣ ತಜ್ಞರಾಗಿ ಕೆಎಲ್‌ಇ ಸಮಾಜವನ್ನು ಸಂಸ್ಥಾಪಕ ಸಪ್ತ ಋಷಿಗಳು ಕಲ್ಪಿಸಿದ ಹಾದಿಯಲ್ಲಿ ಪಟ್ಟು ಬಿಡದೆ ಮುನ್ನಡಿಸಿದ್ದಾರೆ. ಸಂಸ್ಥೆ ದೊಡ್ಡ ಮಟ್ಟದಲ್ಲಿ ಬೆಳೆಯಲು ಡಾ. ಪ್ರಭಾಕರ ಕೋರೆಯವರ ಪಾತ್ರ ಬಹಳ ಮಹತ್ವದ್ದು. ಸಂಸ್ಥೆಯು 18,000 ಕ್ಕೂ ಹೆಚ್ಚಿನ ಕುಟುಂಬಗಳಿಗೆ ಉದ್ಯೋಗ ನೀಡಿದೆ, 1,38,000 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಸಂಸ್ಥೆಯು ಉತ್ತಮ ಶಿಕ್ಷಣ ನೀಡುತ್ತಿದೆ ಎಂದರು.

ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯರಾದ ಬಸವರಾಜ ಡಪಳಾಪೂರ, ಅಶೋಕ್ ಅಂಗಡಿ, ಉಪ ಪ್ರಾಚಾರ್ಯರಾದ ಬಿ.ಎನ್.ಅರಕೇರಿ, ಆರ್.ಎನ್.ಪಟ್ಟಣಶೆಟ್ಟಿ, ಸುಭಾಸ ಮುಶಿ, ಮಕ್ಕಳ ಸಾಹಿತಿ ಎ.ಎನ್.ಪಢತಾರೆ, ಐ.ಟಿ.ಐ ಪ್ರಾಚಾರ್ಯ ಎಸ್.ಎಸ್ ಅಂಗಡಿ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ಜಯಶ್ರೀ ಹಿರೇಮಠ ಅಂಗ ಸಂಸ್ಥೆಗಳ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಇದ್ದರು.

ಆರ್.ಎನ್.ಪಟ್ಟಣಶೆಟ್ಟಿ ಸ್ವಾಗತಿಸಿದರು. ಎಸ್.ಎಸ್. ಅಂಗಡಿ ನಿರೂಪಿಸಿದರು. ಬಿ.ಎನ್.ಹಂದಿಗುಂದ ವಂದಿಸಿದರು.

# ಎನ್.ವಿ.ಎನ್ ಪ್ರಾಥಮಿಕ ಶಾಲೆ ಮಾನ್ಯತೆ ರದ್ದು

**ಬಾಗಲಕೋಟೆ :** ನಗರದ ಎನ್.ವಿ.ಎನ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯಡಿ ಶಾಸ್ವತ ಅನುದಾನ ರಹಿತವಾಗಿ ನಡೆಯುತ್ತಿರುವ ಎನ್.ವಿ,ಎನ್ ಪ್ರಾಥಮಿಕ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ವಿವೇಕಾನಂದ ಆದೇಶ ಹೊರಡಿಸಿದ್ದಾರೆ.

ಸದರಿ ಶಾಲೆಯ ಆಡಳಿತ ಮಂಡಳಿಯವರು ಇಲಾಖೆಯ ಅನುಮತಿ ಇಲ್ಲದೇ ಅನಧಿಕೃತವಾಗಿ ಬಾಗಲಕೋಟೆಯಿಂದ ಶಿರೂರಕ್ಕೆ ಸ್ಥಳಾಂತ-ರಿಸಿದ್ದಾರೆ. ಅಲ್ಲದೇ 2017-18ನೇ ಸಾಲಿನಿಂದ ಇಲ್ಲಿಯವರೆಗೆ ಮಾನ್ಯತೆ ನವೀಕಣವಿಲ್ಲದೇ ಮತ್ತು ಮಕ್ಕಳ ದಾಖಲಾತಿ ಶೂನ್ಯ ಹಿನ್ನಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಶಿಫಾರಸ್ಸು ಮೇರೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಸೆಕ್ಷನ್ 39 ಉಪಕಲಂ ರನ್ವಯ ಮಕ್ಕಳ ಭವಿಷ್ಯದ ಹಿತದೃಷ್ಠಿಯಿಂದ ತಕ್ಷದಿಂದ ಜಾರಿಗೆ ಬರುವಂತೆ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಿ ಆದೇಶ ಹೊರಡಿಸಿದ್ದಾರೆ.

# ವಕ್ಫ್ ಸರ್ವನಾಶ ಖಚಿತ ಯತ್ನಾಳ ಭವಿಷ್ಯ

## ಧರ್ಮ ರಕ್ಷಣೆಗಾಗಿ ಮಠಾಧಿಪತಿಗಳು ಮಠಬಿಟ್ಟು ಹೊರಬನ್ನಿ: ಬಸನಗೌಡ ಪಾಟೀಲಯತ್ನಾಳ

**ಮಹಾಲಿಂಗಪುರ :** ದೇಶದಲ್ಲಿ ದೊಡ್ಡ ಷಟ್ಯಂತ್ರ ನಡೆದಿದೆ, ಸಾವಿರಾರು ವರ್ಷಗಳ ಇತಿಹಾಸವಿರುವ ಮಠ ಮಂದಿರಗಳನ್ನು ವಕ್ಫ್ ಕಬಳಿಸಲು ನಿಂತಿದೆ. 33 ಲಕ್ಷ ಎಕರೆ ತನ್ನದೆಂದು ವಕ್ಫ್ ಡಿಮ್ಯಾಂಡ್ ಮಾಡುತ್ತಿದೆ ಹೀಗಾದರೆ ದೇಶದಲ್ಲಿ ಹಿಂದೂಗಳು ಉಳಿಯುವುದಿಲ್ಲ. ಧರ್ಮ ಮತ್ತು ದೇಶ ರಕ್ಷಣೆಗಾಗಿ ಎಲ್ಲಾ ಮಠಾಧೀಶರು ಹೊರಬಂದು ಮಾತನಾಡಿ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.



ಬುಧವಾರ ಸಮೀಪದ ಸೈದಾಪುರ ಗ್ರಾಮದಲ್ಲಿ ಜರುಗಿದ ಶಿವಲಿಂಗೇಶ್ವರ ದೇವಸ್ಥಾನ ಉದ್ಘಾಟನೆ, ಲಿಂಗ ಪ್ರಾಣ ಪ್ರತಿಷ್ಠಾಪನೆ, ಕಳಸೋಹಣದ ಪ್ರಯುಕ್ತ ಧರ್ಮಸಭೆಯಲ್ಲಿ ಮಾತನಾಡಿದ ಅವರು ಇಂದು ಮಠಾಧೀಶರನ್ನು ಹೆದರಿಸುತ್ತಿದ್ದಾರೆ. ಇಂದು ಮಾತನಾಡದಿದ್ದರೆ ಮುಂದೆಂದೂ ಮಾತನಾಡದ ಸ್ಥಿತಿ ಬರುತ್ತದೆ. ಈಗಲೇ ಗಟ್ಟಿಯಾಗಿ ಮಾತನಾಡಿ, ಪಾಕಿಸ್ಥಾನದ ಮೂರು ಪಟ್ಟು ಭೂಮಿ ಕೇಳುತ್ತಿರುವ ವಕ್ಫ್ ಮಾಡಿದ ಪಾಪದ ಬಡ್ಡಿ ಸಮೇತ ನಾಶವಾಗುತ್ತದೆ ಎಂದು ಭವಿಷ್ಯ ನುಡಿದರು.

ನಿಡಸೋಸಿಯ ಸಿದ್ಧಸಂಸ್ಥಾನ ಮಠದ ಶಿವಲಿಂಗೇಶ್ವರ ಸ್ವಾಮೀಜಿ ಮಾತನಾಡಿ ಭಾರತೀಯ ಸಂಸ್ಕೃತಿಯಲ್ಲಿ ಗುಡಿ ಗುಂಡಾರಗಳಿಗೆ ವಿಶೇಷ ಸ್ಥಾನ ಮಾನವಿದೆ, ಪರಂಪರೆಯಿದೆ.ಮನುಷ್ಯ ಚೆನ್ನಾಗಿದ್ದರೆ ದೇಶ ಚೆನ್ನಾಗಿರುತ್ತದೆ, ಮನಸ್ಸು ಚೆನ್ನಾಗಿದ್ದರೆ ಮನೆ ಚೆನ್ನಾಗಿರುತ್ತದೆ. ಗುಡಿ ಕಟ್ಟದ ನೀವು ಪರಸ್ಪರ ಮನಸ್ಸುಗಳನ್ನು ಕಟ್ಟಿಕೊಳ್ಳಿ ಎಂದರು.

ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಮಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ ಭಾರತ ಆಧ್ಯಾತ್ಮದ ಶಕ್ತಿಕೇಂದ್ರ. ದೇಹ ದೇಗುಲವಾಗಬೇಕು,ತಲೆ ಕಳಸವಾಗಬೇಕು, ದೇಹ ಶಿವಲಿಂಗನ ದೇಗುಲವಾಗಬೇಕು ಲಿಂಗಕ್ಕೆ ಮನ, ಜಂಗಮಕ್ಕೆ ಧನ ಅರ್ಪಿಸಿ ಎಂದರು.

ಮರೇಗುದ್ದಿಯ ಡಾ.ನಿರುಪಾಧೀಶ್ವರ ಸ್ವಾಮೀಜಿ, ಚಿಮ್ಮಡದ ಪ್ರಭು ಸ್ವಾಮೀಜಿ, ರಬಕವಿಯ ಗುರುಸಿದ್ದೇಶ್ವರ ಸ್ವಾಮಿಜಿ ಆಶೀರ್ವಚನ ನೀಡಿದರು.

ಚಿಕ್ಕಪಡಸಲಗಿಯ ಕಲ್ಯಾಣಯ್ಯ ಬಬಲಾದಿಮಠ, ನಿಜಗುಣಯ್ಯ ಹಿರೇಮಠ, ಈರಯ್ಯ ಮಠಪತಿ, ಮಹಾಂತೇಶ ಶ್ರೀಗಳು ಇದ್ದರು.

ಕೆಎಂಎಫ್ ಮಾಜಿ ಅಧ್ಯಕ್ಷ ರಂಗನಗೌಡ ಪಾಟೀಲಪ್ರಾಸ್ತಾವಿಕವಾಗಿಮಾತನಾಡಿದರು. ಶಿವಲಿಂಗೇಶ್ವರ ಟ್ರಸ್ಟ್ ಕಮಿಟಿ ಅಧ್ಯಕ್ಷ ಮುರಿಗೆಪ್ಪ ಗುಣದಾಳ, ಗ್ರಾಪಂ ಸದಸ್ಯ ಮಲ್ಲಪ್ಪ ಕೌಜಲಗಿ, ಪಿಕೆಪಿಎಸ್ ಅಧ್ಯಕ್ಷ ಬಸವಣ್ಣೆಪ್ಪ ಬ್ಯಾಳಿ, ಗೌಡಪ್ಪಗೌಡ ಪಾಟೀಲ, ಸಿದ್ದುಗೌಡ ಪಾಟೀಲ, ಚನ್ನಪ್ಪ ಪಟ್ಟಣಶೆಟ್ಟಿ, ಮಹಾಲಿಂಗಪ್ಪ ಸನದಿ, ಯಮುನಪ್ಪ ಉಪ್ಪಾರ, ಮಲಗೌಡ ಪಾಟೀಲ, ರಾಮನಗೌಡ ಪಾಟೀಲ, ಮುತ್ತಪ್ಪ ಭೀ.ನಾಯಕ, ಮಹಾದೇವ ಗುಣದಾಳ, ಶಿವಲಿಂಗ ಪಾಶ್ಚಾಪುರ, ಅರ್ಜುನ ಪಾಶ್ಚಾಪುರ,

ಕಲ್ಲಪ್ಪ ಉಳ್ಳಾಗಡ್ಡಿ, ಲಕ್ಷ್ಮಣ ಪಾಶ್ಚಾಪುರ, ಶಿವಲಿಂಗ ಮುಗಳಖೋಡ, ಸಿದ್ಧಪ್ಪ ಪಾಶ್ಚಾಪುರ, ರಮೇಶ ಚಿಂಚಲಿ, ಶಿವಪ್ಪ ಪಾಶ್ಚಾಪುರ, ಪರಮಾನಂದ ಉಳ್ಳಾಗಡ್ಡಿ, ಶಂಕರ ಪಾಶ್ಚಾಪುರ, ಗುರುಪಾದ ಗುಣದಾಳ, ಆನಂದ ಕೇತಗೌಡ, ನಾಗಪ್ಪ ಕೇತಗೌಡ, ಬಸವರಾಜ ಮುತ್ತಪ್ಪಗೋಳ, ಪುಂಡಲೀಕಪ್ಪ ಕೌಜಲಗಿ, ಶಿವಪ್ಪ ಹೋಳ್ಕರ, ಮಹಾಲಿಂಗಪ್ಪ ಬಾಯಪ್ಪಗೋಳ, ಬಾಳನಾಯಕ ನಾಯಕ ಮತ್ತು ಶಿವಲಿಂಗೇಶ್ವರ ಸೇವಾ ಮಂಡಳಿ ಸದಸ್ಯರು ಮತ್ತು ಹಿರಿಯರು ಇದ್ದರು.

ರೇಖಾ ಬಿರಾದಾರ ಮತ್ತು ಕುಮಾರ ಬಡಿಗೇರ ಪ್ರಾರ್ಥಿಸಿದರು. ಪತ್ರಕರ್ತ ನಾರನಗೌಡ ಉತ್ತಂಗಿ ನಿರೂಪಿಸಿದರು.

# ಹುರಕಡ್ಲಿ ಪೌಂಡೇಶನ್ ಸಾಮಾಜಿಕ ಸೇವಾಕಾರ್ಯ ಶ್ಲಾಘನೀಯ: ಸಹಜಾನಂದ ಸ್ವಾಮೀಜಿ

**ಮಹಾಲಿಂಗಪುರ :** ಇಂದು ಎಷ್ಟೋ ಜನ ಮಕ್ಕಳು ವಯಸ್ಸಾದಂತೆ ತಂದೆ-ತಾಯಿಯನ್ನು ವೃದ್ಧಾಶ್ರಮಕ್ಕೆ ಕಳಿಸುವ ಇಂತಹ ಕಾಲದಲ್ಲಿ ಹೆತ್ತವರ ಸ್ಮರಣೆಗಾಗಿ ಪ್ರತಿವರ್ಷ ಜನೋಪಕಾರಿ ಕೆಲಸ ಮಾಡುತ್ತಿರುವ ಸಿ.ಎಂ.ಹುಕರಡ್ಲಿ ಪೌಂಡೇಶನ್‌ಸಾಮಾಜಿಕಸೇವಾಕಾರ್ಯವು ಶ್ಲಾಘನೀಯ ಎಂದು ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿ ಹೇಳಿದರು.



ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಸಿ.ಎಂ.ಹುರಕಡ್ಲಿ ಫೌಂಡೇಶನ್ ವತಿಯಿಂದ ಹಮ್ಮಿಕೊಂಡ ಅಂಗವಿಕಲರಿಗಾಗಿ ಕೃತಕ ಕೈಕಾಲು ಜೋಡಣೆ ಶಿಬಿರದ ಅಂಗವಾಗಿ ಅಳತೆ ತೆಗೆದುಕೊಳ್ಳುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದರು.

ಅಂಗವೈಕಲ್ಯತೆಯುಳ್ಳ ಜನರಿಗೆ ಉಚಿತವಾಗಿ ಕೃತಕ ಕೈಕಾಲು ಜೋಡಣೆ ಶಿಬಿರ ಹಮ್ಮಿಕೊಳ್ಳುವ ಮೂಲಕ ಜನಹಿತವಾದ ಕಾರ್ಯ ಮಾಡುವ ಹುರಕಡ್ಲಿ ಪೌಂಡೇಶನ ಸಾಮಾಜಿಕ ಸೇವಾಕಾರ್ಯವು ಇತರರಿಗೆ ಮಾದರಿಯಾಗಿದೆ ಎಂದರು.

ಸಿದ್ದಾನಂದ ಭಾರತಿ ಸ್ವಾಮಿಜಿ ಮಾತನಾಡಿ ನಮ್ಮ ಶರೀರದ ಬಾಧೆ ಗುರುತಿಸಿ ತಮ್ಮ ಶಕ್ತ್ಯಾನುಸಾರ ಅನುಕೂಲ ಮಾಡಿಕೊಡಲು ಸಿ.ಎಂ.ಹುರಕಡ್ಲಿ ಫೌಂಡೇಶನ್ ಮುಂದಾಗಿದೆ.

ಇದು ನಿಜವಾದ ಜನೋಪಯೋಗಿ ಕಾರ್ಯ ಎಂದರು.

ಫೌಂಡೇಶನ್‌ನ ಚನಬಸು ಹುರಕಡ್ಲಿ, ಡಾ.ಎಂ.ಎಚ್.ನಾಯಕರ, ಮಹೇಶ ಮನ್ನಯ್ಯನವಮಠ ಮಾತನಾಡಿದರು.

ಪುರಸಭೆ ಸದಸ್ಯರಾದ ಸವಿತಾ ಹುರಕಡ್ಲಿ, ರವಿ ಜವಳಗಿ, ಹಿರಿಯರಾದ ಶ್ರೀಶೈಲಪ್ಪ ಉಳ್ಳೇಗಡ್ಡಿ, ಹಣಮಂತ ಶಿರೋಳ, ಎಸ್.ಎಸ್.ಈಶ್ವರಪ್ಪಗೋಳ, ಗೋವಿಂದಗೌಡ ಪಾಟೀಲ, ಸಂಜು ಬಾರಕೋಲ, ವಿಜಯ ಸಬಕಾಳೆ, ಬಸವರಾಜ ಗಿರಿಸಾಗರ, ಪ್ರಕಾಶ ಬಾಡನವರ, ಮಲ್ಲಪ್ಪ ಟಿರ್ಕಿ, ಕುಮಾರ ಮನವಡೆ, ಸಿದ್ದಪ್ಪ ಧಡೂತಿ, ಬಸವರಾಜ ಹುರಕಡ್ಲಿ, ಹಣಮಂತ ಮೀರಾಪಟ್ಟಿ, ಮಲ್ಲಪ್ಪ ಯಾದವಾಡ ಸೇರಿದಂತೆ ಹಲವರು ಇದ್ದರು.

ಹುಬ್ಬಳ್ಳಿಯ ಮಹಾವೀರ ಲಿಂಬ್ಸ್ ಸೆಂಟರ್‌ನ ಎಂ.ಎಚ್.ನಾಯಕರ ನೇತೃತ್ವದಲ್ಲಿ ರಾಯಚೂರು, ಕಲಬುರ್ಗಿ, ಹುನಗುಂದ, ಚಿಕ್ಕೋಡಿ, ಹುಕ್ಕೇರಿ, ಸಂಕೇಶ್ವರ ಸೇರಿದಂತೆ ವಿವಿಧ ಭಾಗಗಳಿಂದ ಆಗಮಿಸಿದ್ದ 55ಕ್ಕೂ ಹೆಚ್ಚು ಜನರ ಕೃತಕ ಕೈಕಾಲು ಜೋಡಣೆಗೆ ಅಳತೆ ತೆಗೆದುಕೊಳ್ಳಲಾಯಿತು. 85 ಜನರಿಗೆ ನಡೆದಾಡಲುಸಾಯಕಸಾಮಗ್ರಿವಿತರಣೆಗಾಗಿ ನೊಂದಣಿ ಮಾಡಿಕೊಳ್ಳಲಾಯಿತು. ಬರುವ ಡಿಸೆಂಬರ್ 8ರಂದು ನಡೆಯಲಿರುವಾರೋಗ್ಯ ಶಿಬಿರದಲ್ಲಿ ಅಳತೆ ತೆಗೆದುಕೊಂಡ ಫಲಾನುಭವಿಗಳಿಗೆ ಕೃತಕ ಕೈಕಾಲು ಜೋಡನೆ ಮಾಡಲಾಗುವದು.


# ಮಧುಮೇಹ: ಆತಂಕ ಬೇಡ, ಅರಿವಿರಲಿ

*** ಡಾ. ನವೀನ್ ವಿ.ಚರಂತಿಮಠ**
**D.M (Endocrinology)**

ಪ್ರತಿ ವರ್ಷ ನವೆಂಬರ್ 14 ರಂದು ಭಾರತವೂ ಸೇರಿದಂತೆ ಜಗತ್ತಿನಾದ್ಯಂತ 'ವಿಶ್ವ ಮಧುಮೇಹ ದಿನ'ವನ್ನು ಆಚರಿಸಲಾಗುತ್ತಿದೆ. ನವೆಂಬರ್ 14 ಮಧುಮೇಹ ಕಾಯಿಲೆಗೆ ಇನ್ಸುಲಿನ್ ಔಷಧಿ ಕಂಡುಹಿಡಿದ ಸರ್ ಫ್ರೆಡೆರಿಕ್ ಬ್ಯಾಂಟಿಂಗ್ ಅವರ ಜನ್ಮದಿನ ಕೂಡ ಹೌದು. ಅಂತರಾಷ್ಟ್ರೀಯ ಮಧುಮೇಹ ಒಕ್ಕೂಟ ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ಸಹಭಾಗಿತ್ವದಲ್ಲಿ ಪ್ರತಿವರ್ಷ ನವೆಂಬರ್ 14 ರಂದು 'ವಿಶ್ವ ಮಧುಮೇಹ ದಿನ'ವನ್ನು ಆಚರಿಸಲಾಗುವುದು.1991ರಿಂದಈದಿನವನ್ನು ಪ್ರತಿವರ್ಷ ವಿಶ್ವದಾದ್ಯಂತ ಆಚರಿಸುತ್ತಿರುವರು. ಜಾಗತಿಕ ಮಟ್ಟದಲ್ಲಿ ಮಧುಮೇಹ ರೋಗ ಎಲ್ಲ ವಯೋಮಾನದವರಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ವಿಶ್ವ ಮಧುಮೇಹ ದಿನವನ್ನು ಆಚರಿಸುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಲಾಗುತ್ತಿದೆ. ಪ್ರತಿವರ್ಷ ವಿಶಿಷ್ಠ ವಿಷಯವೊಂದನ್ನು ಶೀರ್ಷಿಕೆ/ಹೇಳಿಕೆಯಾಗಿಟ್ಟುಕೊಂಡು (ಥೀಮ್) ಚರ್ಚಿಸಲಾಗುತ್ತದೆ. ವಿಶ್ವ ಮಧುಮೇಹ ದಿನದ 2024 ಶೀರ್ಷಿಕೆ/ಹೇಳಿಕೆ 'ಅಡತಡೆಗಳನ್ನು ಭೇದಿಸುವುದು, ಅಂತರವನ್ನು ನಿವಾರಿಸುವುದು' (Breaking Barriers, Bridging Gaps) ಎನ್ನುವುದಾಗಿದೆ.

ಮಧುಮೇಹ ಎಂದರೇನು?

ಮಧುಮೇಹ ಎನ್ನುವುದು ರಕ್ತದೊಳಗೆ ಅತಿಯಾದ ಸಕ್ಕರೆ ಇರುವಂತಹ ರೋಗ. ಸಕ್ಕರೆ ಅಂಶ (ಗ್ಲುಕೋಸ್) ಎನ್ನುವುದು ದೇಹದ ಸೂಕ್ಷ್ಮ ಕೋಶಗಳು ಮತ್ತು ನರಕೋಶಗಳಿಗೆ ಅತಿ ಮುಖ್ಯವಾದ ಒಂದು ಆಹಾರ ಪದಾರ್ಥವಾಗಿದೆ. ಸಾಮಾನ್ಯವಾಗಿ ಈ ಗ್ಲುಕೋಸ್‌ನ್ನು ಸೂಕ್ಷ್ಮ ಜೀವಿಗಳು ತಮ್ಮೊಳಗೆ ಇಂಧನ ಉತ್ಪಾದನೆಗಾಗಿ ಬಳಸಿಕೊಳ್ಳುತ್ತವೆ. ಜೀವಕೋಶಗಳಿಗೆ ಈ ಗ್ಲುಕೋಸ್‌ನ್ನು ನಿಯಮಿತವಾಗಿ ತಲುಪಿಸುವ ಕೆಲಸವನ್ನು ಇನ್ಸುಲಿನ್ ಮಾಡುತ್ತದೆ. ಅಂದರೆ ನಾವು ಸೇವಿಸಿದ ಆಹಾರದಲ್ಲಿಯ ಸಕ್ಕರೆ ಅಂಶವನ್ನು ಇನ್ಸುಲಿನ್ ಶಕ್ತಿಯಾಗಿ ಪರಿವರ್ತಿಸುತ್ತದೆ. ಇನ್ಸುಲಿನ್ ಎನ್ನುವುದು ಮನುಷ್ಯನ ದೇಹದಲ್ಲಿರುವ ಒಂದು ಹಾರ್ಮೋನ್ ಆಗಿದ್ದು ಇದು ಪ್ಯಾಂಕ್ರಿಯಾಸ್ ಎಂಬಲ್ಲಿ ಉತ್ಪತ್ತಿಯಾಗುತ್ತದೆ. ಪ್ರ್ಯಾಂಕಿಯಾಸ್‌ಗೆ ತೊಂದರೆಯಾದಾಗ ಅಥವಾ ಸೋಂಕಿಗೆ ಒಳಗಾದಾಗ ಇನ್ಸುಲಿನ್ ಉತ್ಪಾದನೆ ಕಡಿಮೆಯಾಗುತ್ತದೆ. ನಮ್ಮ ದೇಹದಲ್ಲಿ ಇನ್ಸುಲಿನ್ ಕೊರತೆ ಉಂಟಾದಾಗ ರಕ್ತದಲ್ಲಿ ಸಕ್ಕರೆ ಪ್ರಮಾಣ ಹೆಚ್ಚಾಗುತ್ತದೆ. ಇದನ್ನು ಮಧುಮೇಹ ಕಾಯಿಲೆ ಎಂದು ಕರೆಯುತ್ತಾರೆ. ಮಧುಮೇಹ ಕಾಯಿಲೆಯಲ್ಲಿ ಪ್ರಮುಖವಾಗಿ



18 ಕ್ಕಿಂತ ಹೆಚ್ಚು ಪ್ರಕಾರಗಳಿವೆ. ಪ್ರತಿ ಪ್ರಕಾರದ ಮಧುಮೇಹ ಕಾಯಿಲೆಗೂ ಪ್ರತ್ಯೇಕ ಚಿಕಿತ್ಸಾ ವಿಧಾನಗಳಿವೆ.

ಮಧುಮೇಹ ಕಾಯಿಲೆಯ ವಸ್ತುಸ್ಥಿತಿ:

ವೈದ್ಯಕೀಯ ಸಂಶೋಧನೆಯ ಪ್ರಕಾರ ಇಂದು ವಿಶ್ವದಲ್ಲಿ 463 ಮಿಲಿಯನ್ ಜನರು ಮಧುಮೇಹ ಕಾಯಿಲೆಯಿಂದ ಬಳಲುತ್ತಿರುವುದು ಕಂಡುಬಂದಿದೆ. ಈ ಸಂಖ್ಯೆ 2030 ರ ಹೊತ್ತಿಗೆ 578 ಮಿಲಿಯನ್ ತಲುಪಲಿದೆ ಎಂದು ಮಧುಮೇಹ ತಜ್ಞರು ಆತಂಕ ವ್ಯಕ್ತಪಡಿಸಿರುವರು. ಪ್ರತಿ 11 ಜನರಲ್ಲಿ ಒಬ್ಬ ಮಧುಮೇಹಿ ರೋಗಿಯಾಗಿದ್ದು ಪ್ರತಿ ಇಬ್ಬರಲ್ಲಿ ಒಬ್ಬ ಮಧುಮೇಹಿ ರೋಗಿಯು ವೈದ್ಯಕೀಯ ತಪಾಸಣೆಗೆ ಒಳಗಾಗುವುದಿಲ್ಲ. ಇನ್ನು ಭಾರತದ ವಿಷಯಕ್ಕೆ ಬಂದರೆ ಸಮೀಕ್ಷೆಯೊಂದರ ಪ್ರಕಾರ ಇಲ್ಲಿ ಸುಮಾರು 65 ಮಿಲಿಯನ್ ಮಧುಮೇಹ ರೋಗಿಗಳಿರುವರು ಎನ್ನುವ ಸಂಗತಿ ಅದೊಂದು ಎಚ್ಚರಿಕೆಯ ಘಂಟೆಯಾಗಿದೆ. ಕಳೆದ ಮೂರು ತಿಂಗಳಲ್ಲಿ ಕರ್ನಾಟಕದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರಲ್ಲಿ ಮಧುಮೇಹದ ಲಕ್ಷಣಗಳು ಕಾಣಿಸಿಕೊಂಡಿವೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ ಮಾಹಿತಿ ನೀಡಿದೆ. ಇದು ತುಂಬ ಆಂತಕದ ಸಂಗತಿಯಾಗಿದೆ ಎಂದು ಕೈಚೆಲ್ಲಿ ಕೂಡುವಂತಿಲ್ಲ. ಸೂಕ್ತಚಿಕಿತ್ಸೆ ಮತ್ತು ಆರೋಗ್ಯಕರ ಜೀವನಶೈಲಿ ಮೂಲಕ ಆರಂಭಿಕ ಹಂತದಲ್ಲಿಯೇ ಮಧುಮೇಹವನ್ನು ನಿಯಂತ್ರಣ ಮಾಡಬಹುದು.

**ಕಾರಣಗಳು:**

ಬದಲಾದ ಜೀವನಶೈಲಿ ಮತ್ತು ಆರೋಗ್ಯದ ಬಗೆಗಿನ ನಿರ್ಲಕ್ಷ್ಯ ಮಧುಮೇಹ ಕಾಯಿಲೆಗೆ ಕಾರಣವಾಗುತ್ತಿವೆಧೂಮಪಾನಮದ್ಯಸೇವನೆ, ತಂಬಾಕು ಸೇವನೆ, ಅತಿಯಾದ ಆಹಾರ ಸೇವನೆ, ಕರಿದ ಪದಾರ್ಥಗಳನ್ನು ತಿನ್ನುವುದು, ದೈಹಿಕ ಚಟುವಟಿಕೆಗಳಿಲ್ಲದಿರುವುದು, ದೇಹದ ಬೊಜ್ಜು, ಅತಿಯಾದ ತೂಕ, ನಿದ್ರಾಹೀನತೆ ಮತ್ತು ಅತಿಯಾದ ಒತ್ತಡ ಇತ್ಯಾದಿ ಸಂಗತಿಗಳು ಮಧುಮೇಹ ಕಾಯಿಲೆಗೆ ಕಾರಣಗಳು. ಕೆಲವೊಮ್ಮೆ ಕುಟುಂಬದ ಇತಿಹಾಸವೂ ಮಧುಮೇಹ ರೋಗ ಕಾಣಿಸಿಕೊಳ್ಳಲು ಕಾರಣವಾಗುತ್ತದೆ.

ಮಧುಮೇಹ ಕಾಯಿಲೆಯ ಲಕ್ಷಣಗಳು:

ಇನ್ಸುಲಿನ್ ಕೊರತೆಯಿಂದ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾದಾಗ ರೋಗಿಯಲ್ಲಿ ಈ ಕೆಳಗಿನ ಲಕ್ಷಣಗಳು ಕಂಡುಬರುತ್ತವೆ.

* ಅತಿಯಾದ ಬಾಯಾರಿಕೆ, ಮೂತ್ರ ವಿಸರ್ಜನೆ ಮತ್ತು ಹಸಿವು
* ಕಣ್ಣಿನ ದೃಷ್ಟಿ ಅಸ್ಪಷ್ಟವಾಗುದು
* ದೇಹದ ತೂಕ ಗಣನೀಯವಾಗಿ ಕಡಿಮೆಯಾಗುವುದು
* ಆಯಾಸ,ಬಳಲಿಕೆಮತ್ತುಸುಸ್ತುಕಾಣಿಸುವವು
* ಚರ್ಮ ಒಣಗುವುದು ಇತ್ಯಾದಿ

**ಮಧುಮೇಹದ ದುಷ್ಪರಿಣಾಮಗಳು:**

ಮಧುಮೇಹ ಕಾಯಿಲೆಯನ್ನು ಆರಂಭದಲ್ಲೆ ಗುರುತಿಸಿ ಸೂಕ್ತ ಚಿಕಿತ್ಸೆ ಪಡೆಯದೆ ಇದ್ದಲ್ಲಿ ಅದು ಅನೇಕ ದೀರ್ಘಾವಧಿ ತೊಂದರೆಗಳಿಗೆ ಕಾರಣವಾಗುತ್ತದೆ, ಮುಖ್ಯವಾಗಿ ರೋಗಿಗಳು ಹೃದಯಾಘಾತ, ನರಗಳ ದುರ್ಬಲತೆ, ಪಾರ್ಶ್ವವಾಯು, ಮೂತ್ರಪಿಂಡ ಹಾಳಾಗುವುದು, ಅಂಧತ್ವ, ಪಾದಗಳಲ್ಲಿ ಅಸ್ಥಿರತೆ ಮತ್ತು ಉರಿತ, ಶ್ರವಣದೋಷ, ಇತ್ಯಾದಿ ಸಮಸ್ಯೆಗಳಿಗೆ ಒಳಗಾಗುತ್ತಾರೆ.

ಮಧುಮೇಹ ತಜ್ಞರನ್ನು ಸಂಪರ್ಕಿಸಿ


ಮಧುಮೇಹ ಕಾಯಿಲೆಯ ಲಕ್ಷಣಗಳು ಕಂದಬಂದರೆ ತಕ್ಷಣವೇ ಮಧುಮೇಹ ತಜ್ಞರನ್ನು ಸಂಪರ್ಕಿಸಬೇಕು. ಅನಿಯಮಿತ ಮೂತ್ರವಿಸರ್ಜನೆ, ಅತಿಯಾದ ಬಾಯಾರಿಕೆ, ಹಠಾತ್ ತೂಕ ನಷ್ಟದಂತಹ ಮಧುಮೇಹದ ಯಾವುದೇ ರೋಗಲಕ್ಷಣಗಳು ಕಾಣಿಸಿದರೆ ಮಧುಮೇಹ ತಜ್ಞರನ್ನು ಭೇಟಿಯಾಗಿ ಅವರ ಗಮನಕ್ಕೆ ತರುವುದು ಆರೋಗ್ಯದ ದೃಷ್ಟಿಯಿಂದ ಅಗತ್ಯವಾದದ್ದು. ಮಧುಮೇಹ ತಜ್ಞರ ನಿಯಮಿತ ತಪಾಸಣೆಯು ರಕ್ತದಲ್ಲಿನ ಗ್ಲುಕೋಸ್ ಮಟ್ಟವನ್ನು ಪರೀಕ್ಷಿಸಲು ಮತ್ತು ಮಧುಮೇಹದ ತೊಡಕುಗಳನ್ನು ತಡೆಯಲು ಸಹಾಯ ಮಾಡುತ್ತದೆ.


**ಮಧುಮೇಹ ಕಾಯಿಲೆಗೆ ಚಿಕಿತ್ಸೆ:**

ಮಧುಮೇಹ ಕಾಯಿಲೆಯನ್ನು ನಿಯಂತ್ರಿಸಲು ಸಾಧ್ಯ ಮತ್ತು ಸುಖಮಯ ಜೀವನ ನಡೆಸಲು ಸಾಧ್ಯವಿದೆ ಎನ್ನುವುದನ್ನು ವೈದ್ಯಕೀಯ ವಿಜ್ಞಾನ ತೋರಿಸಿಕೊಟ್ಟಿದೆ. ಆರೋಗ್ಯಕರ ಮತ್ತು ಮಿತ ಆಹಾರ ಸೇವನೆ, ಹೆಚ್ಚಿನ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು, ವ್ಯಾಯಾಮ ಇತ್ಯಾದಿ ನಿಯಮಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮಧುಮೇಹ ರೋಗವನ್ನು ನಿಯಂತ್ರಿಸಲು ಸಾಧ್ಯ. ಮಧುಮೇಹ ರೋಗಿಗಳು ರೋಗದ ಲಕ್ಷಣಗಳು ಕಾಣಿಸಿಕೊಂಡ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಅವರ ಸಲಹೆಯಂತೆ ಔಷಧಿ ಮತ್ತು ಇನ್ಸುಲಿನ್ ಇಂಜೆಕ್ಷನ್ ಪಡೆದು ಮಧುಮೇಹ ಕಾಯಿಲೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬಹುದು.

**ಮಧುಮೇಹ ಕುರಿತು ತಪ್ಪುಗ್ರಹಿಕೆಗಳು:**

ಮಧುಮೇಹ ಕಾಯಿಲೆ ಕುರಿತು ಅನೇಕ ತಪ್ಪು ಗ್ರಹಿಕೆಗಳು ಜನಸಾಮಾನ್ಯರಲ್ಲಿವೆ. ಅವುಗಳಲ್ಲಿ ಮುಖ್ಯವಾದದ್ದು ಒಮ್ಮೆ ವ್ಯಕ್ತಿಯನ್ನು ಇನ್ಸುಲಿನ್ ಚಿಕಿತ್ಸೆಗೆ ಒಳಪಡಿಸಿದಾಗ ಇನ್ಸುಲಿನ್‌ನಿಂದ ಹೊರತರಲಾಗದು ಮತ್ತು ಅವನು ಜೀವನ ಪೂರ್ತಿ ಇನ್ಸುಲಿನ್ ಮೇಲೆ ಅವಲಂಬಿತನಾಗುತ್ತಾನೆ ಎಂಬ ತಪ್ಪು ತಿಳುವಳಿಕೆ ಇದೆ. ಸಕ್ಕರೆ ಬದಲು ಬೆಲ್ಲ ಸೇವಿಸಬಹುದು ಎಂದು ಅನೇಕರು ತಪ್ಪು ತಿಳಿದುಕೊಂಡಿರುವರು. ಆದರೆ ಬೆಲ್ಲ ಮತ್ತು ಸಕ್ಕರೆ ಒಂದೇ ಪದಾರ್ಥದಿಂದ ತಯ್ಯಾರಾಗುವುದರಿಂದ ಎರಡೂ ಕೂಡ ಮಧುಮೇಹಿಗಳಿಗೆ ಮಾರಕ. ಜೊತೆಗೆ ಮಧುಮೇಹ ತೀವ್ರ ಕಾಯಿಲೆಯಲ್ಲ, ಅತಿಯಾದ ಬೊಜ್ಜಿರುವ ವ್ಯಕ್ತಿಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ, ಮಧುಮೇಹಿಗಳು ಅಂಗವೈಕಲ್ಯಕ್ಕೆ ಒಳಗಾಗುತ್ತಾರೆ, ಈ ಕಾಯಿಲೆ ಇರುವವರು ಕ್ರೀಡೆಗಳಲ್ಲಿ ಭಾಗವಹಿಸಬಾರದು ಇತ್ಯಾದಿ ತಪ್ಪುಗ್ರಹಿಕೆಗಳಿವೆ. ಈ ತಪ್ಪುಗ್ರಹಿಕೆಗಳಿಂದ ಅನೇಕ ಸಂದರ್ಭಗಳಲ್ಲಿ ಮಧುಮೇಹ ರೋಗಿಗಳ ಜೀವಕ್ಕೆ ಅಪಾಯ ಎದುರಾಗುವ ಸಾಧ್ಯತೆ ಇದೆ. ಮಧುಮೇಹ ರೋಗದ ಕುರಿತು ಸರಿಯಾದ ತಿಳುವಳಿಕೆ ಪಡೆದು ಕಾಯಿಲೆಯನ್ನು ನಿಯಂತ್ರಿಸಿ ಆರೋಗ್ಯಕರ ಮತ್ತು ಸುಖಕರ ಜೀವನವನ್ನು ನಡೆಸಬಹುದು.






**ಕುಮಾರೇಶ್ವರ ಆಸ್ಪತ್ರೆಯಲ್ಲಿ ಮಧುಮೇಹ ನಿಯಂತ್ರಣಕ್ಕೆ ಚಿಕಿತ್ಸೆ:**

ಬಿ.ವಿ.ವಿ ಸಂಘದ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯಲ್ಲಿ 'ಡಯಾಬಿಟಿಸ್ ರಿಸ್ಕ್ ಪ್ರೊಫೈಲರ್' ಎನ್ನುವ ಅತ್ಯಾಧುನಿಕ ಯಂತ್ರದ ಸಹಾಯದಿಂದ ಮಧುಮೇಹ ಸಂಬಂಧಿತ ವಿವಿಧ ಕಾಯಿಲೆಗಳನ್ನು ಶೀಘ್ರವಾಗಿ ತಪಾಸಣೆ ಮಾಡುವ ಸೌಲಭ್ಯವನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಒದಗಿಸಲಾಗಿದೆ. ಈ ಯಂತ್ರದ ಸಹಾಯದಿಂದ ಮಧುಮೇಹ ಕಾಯಿಲೆ ಸಂಬಂಧಿತ ರೋಗಗಳ ತಪಾಸಣೆಗಾಗಿ ಇಡೀ ಪರೀಕ್ಷೆಯು 20 ನಿಮಿಷಗಳಲ್ಲಿ ಪೂರ್ಣಗೊಳ್ಳುತ್ತದೆ. ಹೃದಯ ಪರೀಕ್ಷೆ, ಕೇಂದ್ರ ಅಪಧಮನಿಯ ರಕ್ತದೊತ್ತಡ, ಅಂತ:ಸ್ರಾವಕ ಕ್ರಿಯೆ, ಬಾಹ್ಯ ಅಪಧಮನಿಯ ಕಾಯಿಲೆ, ಅಪಧಮನಿಯ ಆರೋಗ್ಯ, ಅಪಧಮನಿಯ ಬಿಗಿತ ಸೂಚ್ಯಂಕ, ಬಾಹ್ಯ ನರಮಂಡಲದ ಕಾಯಿಲೆ, ತೊಡೆ ಎಲುಬಿನ ಪಿ.ಡಬ್ಲ್ಯೂ.ವಿ, ಶ್ವಾಸಕೋಶದ ಕಾರ್ಯ, ನಾಡಿ ಬಡಿತದ ವೇಗ, ಪಾದಗಳ ಅದರುವಿಕೆ ಹೀಗೆ ಒಂದೇ ತಪಾಸಣೆಯಲ್ಲಿ ಡಯಾಬೆಟಿಸ್ ರಿಸ್ಕ್ ಪ್ರೊಫೈಲರ್ ಒಟ್ಟು 60 ಪರೀಕ್ಷೆಗಳನ್ನು ಮಾಡಿ ವರದಿ ನೀಡುತ್ತದೆ.

ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯಲ್ಲಿ ಮಧುಮೇಹ ರೋಗಕ್ಕೆ ಪರಿಣಾಮಕಾರಿ ಚಿಕಿತ್ಸೆ ನೀಡಲಾಗುತ್ತಿದೆ ಮತ್ತು ಜನರಲ್ಲಿ ಸೂಕ್ತ ತಿಳುವಳಿಕೆ ಮೂಡಿಸಲಾಗುತ್ತಿದೆ. ಫಂಡೋಸ್ಕೋಪಿ ತಪಾಸಣೆ, ಇಸಿಜಿ, ಬ್ಲಡ್ ಯೂರಿಯಾ, ಸಿರೆಮ್ ಕ್ರಿಯಾಟಿನಿನ್ ಮತ್ತು ವೈದ್ಯರಿಂದ (ಮಧುಮೇಹ, ಹೃದಯರೋಗ, ನರರೋಗ, ಮೂತ್ರಪಿಂಡ ತಜ್ಞರಿಂದ) ತಪಾಸಣೆ ಹಾಗೂ ಸಲಹೆ, ಮಧುಮೇಹ ನಿಯಂತ್ರಣಕ್ಕಾಗಿ ಯೋಗ ತರಬೇತಿ, ಫಿಜಿಯೋಥೆರಪಿ, ಪೌಷ್ಠಿಕ ತಜ್ಞರ ಸಲಹೆ, ಡಯಾಬೆಟಿಕ್ ರಿಸ್ಕ್ ಪ್ರೊಫೈಲರ್ ಮೂಲಕ ತಪಾಸಣೆ ಈ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

* * *



**ಲೇಖಕರು :**
**ಡಾ. ನವೀನ್ ವಿ. ಚರಂತಿಮಠ**
**ಎಮ್.ಬಿ.ಬಿ.ಎಸ್, ಎಮ್.ಡಿ, ಡಿ.ಎಮ್**
**ಮಧುಮೇಹ ತಜ್ಞರು**
**ಎಂಡೊಕ್ರೈನಾಲಜಿ ವಿಭಾಗ**
**ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆ**
**ಬಾಗಲಕೋಟ**

# ತೇರದಾಳ ಕೆರೆ ಒತ್ತುವರಿ ಕುರಿತು ಅರ್ಜಿ ಸರ್ವೇ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ



**ತೇರದಾಳ :** ಪಟ್ಟಣದ ಐತಿಹಾಸಿಕ ಕೆರೆಯನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದು ಕೂಡಲೇ ಕೆರೆಯ ಸರ್ವೇ ನಡೆಸಿ ಸರಹದ್ದು ಗುರುತಿಸಬೇಕೆಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದ್ದರಿಂದ ತಾಲೂಕು ಸರ್ವೇ ಅಧಿಕಾರಿ ಏಕನಾಥ ಮುಂಡಾಸ ಗುರುವಾರ ಕೆರೆಯ ಸುತ್ತ ಬೇಟಿ ನೀಡಿ ಪರಿಶೀಲಿಸಿದರು.

553 ಸರ್ವೇ ನಂಬರ ಪ್ರಕಾರ ಕೆರೆಯ ಒಟ್ಟು ವಿಸ್ತೀರ್ಣ 13ಎಕರೆ 5ಗುಂಟೆ ಇದ್ದು, ಸಧ್ಯ ಸ್ಥಳ ಪರಿಶೀಲನೆ ನಡೆಸಲಾಗಿದೆ. ಶೀಘ್ರದಲ್ಲಿ ಸರ್ವೇ ಕಾರ್ಯ ಪ್ರಾರಂಭಿಸಿ 15 ದಿನಗಳಲ್ಲಿ ಪೂರ್ಣಗೊಳಿಸಿ ಸರಹದ್ದು ಗುರುತಿಸಲಾಗುವುದು ಎಂದು ತಿಳಿಸಿದರು. ಸರಕಾರಿ ಆಸ್ತಿಗಳನ್ನು ಕಬಳಿಸುವ ಕೆಲಸ ನಡೆದಿದ್ದರು ಅಧಿಕಾರಿಗಳು ಸುಮ್ಮನೆ ಇರುವುದು ಸರಿಯಲ್ಲ.

ಐತಿಹಾಸಿಕ ಇತಿಹಾಸ ಹೊಂದಿರುವ ಕೆರೆ ಅಭಿವೃದ್ಧಿ ಮಾಡುವುದನ್ನು ಬಿಟ್ಟು ಜಾಗವನ್ನು ಒತ್ತುವರಿ ಮಾಡಿದರೆ ಹೇಗೆ.

ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ ಎಂದು ಅರ್ಜಿದಾರ ಸಾಗರ ಸರಿಕರ ಅಧಿಕಾರಿಗಳ ಗಮನ ಸೆಳೆದರು.

ಪುರಸಭೆ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ಅಭಿಯಂತರೆ ಭಾಗ್ಯಶ್ರೀ ಪಾಟೀಲ, ಗ್ರಾಮ ಆಡಳಿತಾಧಿಕಾರಿ ರೇವಸಿದ್ದ ಕಮತೆ ಇದ್ದರು.

# ದೇಶಕ್ಕೆ ಸಹಕಾರಿ ರಂಗದ ಕೊಡುಗೆ ಅಪಾರ



**ರಬಕವಿ-ಬನಹಟ್ಟಿ :** ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರಿ ರಂಗದ ಪಾತ್ರ ಬಹಳಷ್ಟು ಮುಖ್ಯವಾಗಿದ್ದು, ಸಹಕಾರಿ ಸಂಘಗಳ ಕೊಡುಗೆ ಅಪಾರ ಎಂದು ರಬಕವಿ ಬನಹಟ್ಟಿ ತಾಲ್ಲೂಕಿನ ನಾವಲಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸಿದ್ದು ಲೆಂಡಿ ತಿಳಿಸಿದರು.

ಅವರು ಗುರುವಾರ ಸಮೀಪದ ನಾವಲಗಿ ಗ್ರಾಮದಲ್ಲಿ ಪಿ.ಕೆ.ಪಿ.ಎಸ್. ನಲ್ಲಿ ಸಹಕಾರಿ ಸಪ್ತಾಹದ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಸಹಕಾರಿ ಸಂಘಗಳ ಅಭಿವೃದ್ಧಿಗಾಗಿ ಅಲ್ಲಿಯ ನಿರ್ದೇಶಕರು, ಸಿಬ್ಬಂದಿ ವರ್ಗದವರು ಮತ್ತು ಸದಸ್ಯರು ಪ್ರಾಮಾಣಿಕವಾಗಿ ಕಾರ್ಯ ಮಾಡಬೇಕು. ಸಾಲಗಾರರು ಮೇಲೂ ಸಾಕಷ್ಟು ಜವಾಬ್ದಾರಿ ಇದ್ದು ಸರಿಯಾದ ಸಮಯದಲ್ಲಿ ಸಾಲವನ್ನು ಮರುಪಾವತಿ ಮಾಡಿದರೆ ಸಂಘಗಳ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಸಿದ್ದು ಲೆಂಡಿ ತಿಳಿಸಿದರು.

ಉಪಾಧ್ಯಕ್ಷ ವಿಠ್ಠಲ ಜನವಾಡ, ಸದಸ್ಯರಾದ ಆನಂದ ಕಂಪು, ಗಿರೀಶ ಕಾಂತಿ, ಕಾರ್ಯದರ್ಶಿ ಮಹಾಂತೇಶ ಬಿದರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಾಧನೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಿ



**ಜಮಖಂಡಿ :** ಮನುಷ್ಯ ಜೀವನದಲ್ಲಿ ಸಾಧನೆ ಮಾಡಬೇಕಾದರೆ ಕೆಲವೊಂದಿಷ್ಟು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಬದುಕಿನಲ್ಲಿ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದರೆ ಕೀಳರಿಮೆಯನ್ನು ತೆಗೆದು ಹಾಕಬೇಕೆಂದು ಶಿಕ್ಷಣತಜ್ಞಪ್ರೊ.ಬಸವರಾಜ ಕೊಣ್ಣೂರ ಹೇಳಿದರು.

ನಗರದ ಸರಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ಗುರುವಾರ ಪ್ರಸಕ್ತ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ರೇಂಜರ್ಸ್, ರೆಡ್‌ಕ್ರಾಸ್ ಹಾಗೂ ಎನ್.ಎಸ್.ಎಸ್. ಘಟಕಗಳ ವಾರ್ಷಿಕ ಚಟುವಟಿಕೆಗಳ ಕಾರ್ಯಕ್ರಮ ಉದ್ಘಾಟಿಸಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಕ್ಷಮೆ ಜಗತ್ತಿನ ಅತ್ಯಂತ ಗೌರವಾನ್ವಿತ ಪದವಾಗಿದೆ. ಸ್ನೇಹಿತ, ಕುಟುಂಬ, ಸಮಾಜದೊಂದಿಗೆ ಜೀವಿಸಿರುವ ನಾವೆಲ್ಲ ಕ್ಷಮೆ ಗುಣವನ್ನು ಅಳವಡಿಸಿಕೊಳ್ಳಬೇಕು. ಯಾರಿಗೂ ತಂದೆ-ತಾಯಿ ಋಣ ತೀರಿಸಲು ಸಾಧ್ಯವಿಲ್ಲ. ಮನುಷ್ಯ ಸಾಧನೆ ಹಾದಿಯಲ್ಲಿ ಸಾಗಿ ತಮ್ಮ ಗುರಿಯನ್ನು ತಲುಪಬೇಕೆಂದರೆ ಅವರಲ್ಲಿ ತಾಳ್ಮೆ, ಸಹನೆ, ಕಠಿಣ ಪರಿಶ್ರಮ ದೊಂದಿಗೆ ಛಲದ ಮನೋಭಾವನೆ ಬೆಳಸಿಕೊಳ್ಳಬೇಕು. ಎಲ್ಲರೊಂದಿಗೂ ಸ್ನೇಹ ಭಾವದಿಂದಇರಬೇಕು. ಶಿಕ್ಷಣದಲ್ಲಿ ಯಾವುದೇ ಪದವಿಯನ್ನು ಪಡೆದರು ಅದಕ್ಕೆ ನಾವು ಹೆಮ್ಮೆ ಪಡಬೇಕು. ಶಿಕ್ಷಣ ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ ಪ್ರಮುಖ ಸಾಧನವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಸುನಂದಾ ಎಸ್. ಶಿರೂರ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಚಿಂತನೆ, ನಿರಂತರ ಅಧ್ಯಯನದಿಂದ ಮಾತ್ರ ಗುರಿಯನ್ನು ಸಾಧಿಸಲು ಸಾಧ್ಯ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗವನ್ನು ಪಡೆದುಕೊಳ್ಳಬೇಕೆಂದರೆ ನಿರಂತರ ಅಧ್ಯಯನದಿಂದ ಸಾಧ್ಯವಾಗಲಿದೆ.ಪ್ರತಿಯೊಬ್ಬರು ಸಾಮಾಜಿಕ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು. ಪಠ್ಯದ ಚಟುವಟಿಕೆಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ವಿದ್ಯಾರ್ಥಿಗಳು ಭಾಗವಹಿಸಬೇಕು ಎಂದರು. ಐ.ಕ್ಯೂ.ಎ.ಸಿ. ಘಟಕ ಸಂಯೋಜಕ ಡಾ.ವ್ಹಿ.ಆರ್.ದಳವಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಎಸ್.ಪಿ.ಸಜ್ಜನ, ಎ.ಎಸ್.ಪೂಜಾರಿ, ಎನ್.ಶ್ರೀಮಯಿ, ಆರ್. ಹೆಚ್..ಹಳ್ಳಿ, ಡಾ.ಎಸ್.ಎಸ್.ಸಿದ್ದಾಪೂರ, ಡಾ. ಎಸ್. ಎನ್.ಭಜಂತ್ರಿ, ಡಾ.ಎಂ.ಎಸ್. ಹಡಪದ, ಉಮೇಶ ದೇಸಾಯಿ, ಡಾ.ಎಸ್. ಎನ್. ಮಣಕವಾಡ, ಎಸ್.ಕೆ.ಡೆಂಬರೆ, ಎ.ಎಸ್.ಹಿರೇಮಠ, ಆರ್.ಎಸ್.ಜಾಧವ ಇದ್ದರು.

ಮಹಿಮಾ ವಾಸ್ತರ ಪ್ರಾರ್ಥಿಸಿದರು. ಆರ್.ಬಿ.ಶಿತೋಳೆ ಸ್ವಾಗತಿಸಿದರು. ಡಾ.ವೈ. ವೈ.ಕೊಕ್ಕನವರ ಅತಿಥಿಗಳ ಪರಿಚಯ ಮಾಡಿದರು. ಡಾ. ಅರುಣ ಕಾಂಬಳೆ ಸ್ವಾಗತಿಸಿದರು. ರೇಂಜರ್ಸ್ ವಿಭಾಗದ ಸಂಯೋಜಕಿ ವೈ.ಎನ್. ಸುಮಾ ನಿರೂಪಿಸಿದರು. ಪುಷ್ಪಾ ಹೊಸಟ್ಟಿ ವಂದಿಸಿದರು.

# ಬಸವಾನಂದ ಪ್ರೌಢಶಾಲೆಯಲ್ಲಿ ಮಕ್ಕಳ ದಿನಾಚರಣೆ



**ಮಹಾಲಿಂಗಪುರ :** ಗುರುವಾರ ಪಟ್ಟಣದ ಬಸವಾನಂದ ಪ್ರೌಢಶಾಲೆಯಲ್ಲಿ ವಿಶೇಷವಾಗಿ ಮಕ್ಕಳ ದಿನಾಚರಣೆ ಆಚರಿಸಲಾಯಿತು. ಶಾಲೆಯ 10ನೇ ತರಗತಿಯ ವಿದ್ಯಾರ್ಥಿಗಳೇ ಸಮಾರಂಭದ ಅಧ್ಯಕ್ಷರಾಗಿ, ಅತಿಥಿಗಳಾಗಿ ಕಾರ್ಯಕ್ರಮ ನಿರ್ವಹಿಸಿದರು. ಪ್ಯಾಶನ್ ಶೋನಲ್ಲಿ ನೆಹರುಜಿ, ವಲ್ಲಬಾಯಿ ಪಟೇಲ್ ಸೇರಿದಂತೆ ಮಹಾನ ಪುರುಷರ ವೇಶಭೂಷಣ ಹಾಗೂ ಸೈನಿಕರು, ಸ್ವಾಮಿಜಿ, ವೈದ್ಯರು, ಟಿವ್ಹಿ ನಿರೂಪಕರು, ಶಿಕ್ಷಕರು ಸೇರಿದಂತೆ ವಿವಿಧ ಅವತಾರಗಳಲ್ಲಿ ಅಭಿನಯಿಸಿ ಶಿಕ್ಷಕರಿಂದ ಮೆಚ್ಚುಗೆ ಗಳಿಸಿದರು.

ಮಕ್ಕಳ ಸಾಹಿತಿ ಅಣ್ಣಾಜಿ ಫಡತಾರೆ, ಡಾ.ಬಿ.ಡಿ.ಸೋರಗಾಂವಿ, ಸಿ.ಎಂ.ಕಟಗಿ, ಮುಖ್ಯಗುರುಗಳಾದ ಎಸ್.ಕೆ.ಗಿಂಡೆ, ಎಸ್. ಎಂ.ಮೂಗಳಖೋಡ ಸೇರಿದಂತೆ ಶಿಕ್ಷಕರು, ಶಿಕ್ಷಕಿಯರು, ವಿದ್ಯಾರ್ಥಿಗಳು ಸೇರಿದಂತೆ ಹಲವರು ಇದ್ದರು.

## ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಅಪ್ರೆಂಟಿಶಿಪ್ ತರಬೇತಿ

**ಬಾಗಲಕೋಟೆ :** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರಸಕ್ತ ಸಾಲಿಗೆ ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಪದವಿ, ಸ್ನಾತಕೋತ್ತರ ಪದವಿ ಹೊಂದಿರುವ ವಿದ್ಯಾರ್ಥಿಗಳಿಗೆ 1 ವರ್ಷ ಅವಧಿಯ ಅಂಪ್ರೆಂಟಿಸ್ ತರಬೇತಿ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜನವರಿ 2025 ರಿಂದ ಡಿಸೆಂಬರ 2025ವರೆಗೆ ಜಿಲ್ಲೆಗೆ ತಲಾ ಒಬ್ಬರಂತೆ ಓರ್ವ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿ ಸೇರಿ ಇಬ್ಬರಿಗೆ ಅಪ್ರೆಂಟಿಸ್ ತರಬೇತಿ ನೀಡಲಾಗುತ್ತದೆ. ಪ್ರತಿ ವಿದ್ಯಾರ್ಥಿಗೆ ಮಾಹೆಯಾನ 15 ಸಾವಿರ ರೂ.ಗಳಂತೆ ತರಬೇತ ಭತ್ಯೆ ನೀಡಲಾಗುತ್ತದೆ. ಕರ್ನಾಟಕದಲ್ಲಿ ಕಾನೂನಾತ್ಮಕವಾಗಿ ಸ್ಥಾಪಿತಗೊಂಡ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ಹಾಗೂ ಕಂಪ್ಯೂಟರ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಭುತ್ವತೆ ಇರುವ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ತರಬೇತಿಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನ ನವೆಂಬರ 21 ಆಗಿದ್ದು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ರೂ.ನಂ.35, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ವಾರ್ತಾಧಿಕಾರಿ ಕಸ್ತೂರಿ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತೋಟದ ಶಾಲೆಯ ವಿದ್ಯಾರ್ಥಿಗಳಿಂದ ಮಕ್ಕಳ ದಿನಾಚರಣೆ



**ರಬಕವಿ-ಬನಹಟ್ಟಿ :** ದೇಶದ ಪ್ರಥಮ ಪ್ರಧಾನಿ ಪಂಡಿತ ಜವಾಹರಲಾಲ ನೆಹರು ಅವರು ಮಕ್ಕಳ ಅಭಿವೃದ್ಧಿ ಮತ್ತು ಶಿಕ್ಷಣಕ್ಕೆ ಸಾಕಷ್ಟು ಮಹತ್ವವನ್ನು ನೀಡಿದ್ದರು. ಆದ್ದರಿಂದ ಅವರ ಜಯಂತ್ಯೋತ್ಸವವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಣೆ ಮಾಡಲಾಗುತ್ತಿದೆ. ಮಕ್ಕಳು ನೆಹರು ಅವರ ಆದರ್ಶಗಳನ್ನು ತಿಳಿದುಕೊಳ್ಳಬೇಕು ಎಂದು ಸಮೀಪದ ಜಗದಾಳ ಗ್ರಾಮದ ಕಾನಟ್ಟಿ ತೋಟದ ಶಾಲೆಯ ಮುಖ್ಯ ಶಿಕ್ಷಕ ರಾಮಣ್ಣ ವಡ್ಡರ ತಿಳಿಸಿದರು.

ಅವರು ಕಾನಟ್ಟಿ ತೋಟದ ಶಾಲೆಯಲ್ಲಿ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದರು. ಶಿಕ್ಷಕ ರವೀಂದ್ರ ಸಂಪಗಾಂವಿ ಮಾತನಾಡಿ ಇಂದಿನ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಭವ್ಯ ಭಾರತವನ್ನು ನಿಮಿ9ಸುವವರು. ಅವರಿಗೆ ಸೂಕ್ತವಾದ ಮಾರ್ಗದರ್ಶನ ಅಗತ್ಯವಾಗಿದೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸೂಕ್ತ ಪ್ರೋತ್ಸಾಹ ನೀಡುವಂತಾಗಬೇಕು ಎಂದರು. ಸಿದ್ಧರಾಮಯ್ಯ ಮಠ ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ವಿದ್ಯಾರ್ಥಿ ವೇತನ: ಅರ್ಜಿ ದಿನಾಂಕ ವಿಸ್ತರಣೆ

**ವಿಜಯಪುರ :** 2024-25ನೇ ಸಾಲಿನಲ್ಲಿ 1ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ನ ಮೂಲಕ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು 30-11-2024ರವರೆಗೆ ವಿಸ್ತರಿಸಲಾಗಿದೆ ಎಂದು ವಿಜಯಪುರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಪ್ರಕಟಣೆ ತಿಳಿಸಿದೆ.

## ನೀಲಕಂಠೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಮಕ್ಕಳ ದಿನಾಚರಣೆ

## ಅನುಭಮ ಮಂಟಪದ ಶಿವ-ಶರಣೆಯರಾದ ಮಕ್ಕಳು!

## ಮಕ್ಕಳು ಹೇಳಿದ ವಚನಗಳಿಗೆ ಫಿದಾಗೊಂಡ ಪಾಲಕರು



**ತೇರದಾಳ :** ಪಟ್ಟಣದ ಕುರುಹಿಶೆಟ್ಟಿ ನೀಲಕಂಠೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಗುರುವಾರ ಮಕ್ಕಳ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ನಿಮಿತ್ತ 12ನೇ ಶತಮಾನದ ಅನುಭಮ ಮಂಟಪ ನಿರ್ಮಿಸಿ ಅಂದಿನ ಅನುಭವ ಮಂಟಪದಲ್ಲಿದ್ದ ಪೀಠಾಧ್ಯಕ್ಷ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮೇಶ್ವರ, ಶಿಶುನಾಳ ಷರೀಫ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಗಂಗಾಂಬಿಕಾ, ನೀಲಾಂಬಿಕಾ, ಸತ್ಯಕ್ಕ, ಐದಕ್ಕಿ ಲಕ್ಕಮ್ಮ ಸೇರಿದಂತೆ ವಚನ ಸಾಹಿತ್ಯದ ಶಿವ-ಶರಣೆಯರ ವೇಷಗಳನ್ನು ಮಕ್ಕಳು ಧರಿಸಿದ್ದರು. ಒಬ್ಬೊಬ್ಬರಂತೆ ವಚನಗಳನ್ನು ಹೇಳುವ ಮೂಲಕ ಪಾಲಕರ ಮನಗೆದ್ದರು. ತಮ್ಮ ಮಕ್ಕಳು ಸ್ಪಷ್ಟವಾಗಿ ಹೇಳಿದ ವಚನಗಳನ್ನು ಕೇಳಿ ಮನಸೋತರು. ನಂತರ ಎಲ್ಲ ಮಕ್ಕಳಿಗೆ ಅವರವರ ತಾಯಂದಿರಿಂದ ಕೈತುತ್ತು ತಿನ್ನಿಸುವ ಮೂಲಕ ಮಾತೃಭೋಜನ ಜರುಗಿತು. ಪಾಲಕರು ಹಾಗೂ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಬಲೂನ್ ಗೇಮ್, ಕೂಸುಮರಿ, ಹೆಜ್ಜೆ ಮೇಲೆ ಹೆಜ್ಜೆ, ಇಟ್ಟಿಗೆ ಜೋಡಿಸುವ ಆಟ, ಚಂಡು ಎಸೆತ, ಬಲೂನ್ ಬ್ಯಾಲೆನ್ಸ್ ಹಾಗೂ ಬಲೂನ್ ಕ್ಯಾಚ್‌ದಂತಹ ಆಟಗಳಲ್ಲಿ ಮಕ್ಕಳು ಪಾಲಕರು ಪಾಲ್ಗೊಂಡು ಖುಷಿಪಟ್ಟರು. ಶಿಕ್ಷಕರಾದ ಸಂತೋಷ ಖವಾಸಿ, ಉಮೇಳ ಕಳಸದ, ವಿಶ್ವನಾಥ ಉಪ್ಪಿನ, ಶಂಕರ ಆಸಂಗಿ, ಪ್ರಭಾವತಿ ಕೋಷ್ಠಿ, ವರ್ಷಾ ಸವದತ್ತಿ, ಮಲ್ಲಿಕಾರ್ಜುನ ಕೋಷ್ಠಿ, ಪಿ.ಟಿ. ಗೌಡನಾಯಕ, ಎಸ್.ಎಚ್, ಕಡಕೋಳ, ಎ.ಪಿ ಬಿರಡಿ, ಜಿ.ಎಂ. ಅಂಬಲಿ, ರಾಜೇಶ್ವರಿ ಬರಗಿ, ಮಂಜುಳಾ ಬೆನಕಟ್ಟಿ, ಎಂ.ಕೆ. ಆಡಿನ ಇದ್ದರು.



**ಬನಹಟ್ಟಿ : ಇಲ್ಲಿಯ ಸದಾಶಿವ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪಂಡಿತ ಜವಾಹರಲಾಲ ನೆಹರು ಅವರು ಜಯಂತ್ಯೋತ್ಸವದ ಅಂಗವಾಗಿ ಶಿಕ್ಷಕರು ಮತ್ತು ಮಕ್ಕಳು ನೆಹರೂ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಮುಖ್ಯ ಶಿಕ್ಷಕಿ ಪಿ. ಬಿ. ಆಲಗೂರ, ಎಸ್. ವೈ. ಕೌಜಲಗಿ, ಎನ್. ಎಂ. ಹುಣಶ್ಯಾಳ, ಎನ್. ಎನ್. ಪೋಳ, ವಿ. ಬಿ. ಶಿಂಧೆ, ಚಿರಂಜೀವಿ ರೋಡಕರ್, ವಿ. ಸಿ. ಕೋಷ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.**

## ಬನಹಟ್ಟಿಯಲ್ಲಿ ಧರಿದೇವರ ಮತ್ತು ಜಕ್ಕಮ್ಮದೇವಿ ನಂದಿಕೋಲು ಉತ್ಸವ



**ಬನಹಟ್ಟಿ :** ಇಲ್ಲಿ ಧರಿದೇವರ ಮತ್ತು ಜಕ್ಕಮ್ಮದೇವಿ ನಂದಿಕೋಲು ಉತ್ಸವ ಸಂಭ್ರಮ ಸಡಗರದಿಂದ ನಡೆಯಿತು.

ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ದೇವಸ್ಥಾನದಿಂದ ನಂದಿಕೋಲು ಉತ್ಸವ ಸಕಲ ವಾದ್ಯ ಮೇಳದೊಂದಿಗೆ, ಮುತ್ತೈದೆಯರ ಕುಂಭ ಮೇಳದ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಧರೆಪ್ಪ ಪಾಟೀಲ ಅವರ ಮನೆಯವರೆಗೆ ಸಾಗಿತು. ಈ ಸಂದರ್ಭದಲ್ಲಿ ಬಸಯ್ಯ ಹಿರೇಮಠ, ಲಕ್ಷ್ಮಣ ಮುತ್ಯಾ ಸ್ವಾಮಿಗಳು, ಜಯಂತ ಮಿಳ್ಳಿ, ರಾಮಪ್ಪ ಹಂದಿಗುಂದ, ಕಲ್ಲಪ್ಪ ಪಾಟೀಲ, ಮಲ್ಲಪ್ಪ ಗೌಡಪ್ಪನವರ, ರಾಮಪ್ಪ ಪಾಟೀಲ, ಧರೆಪ್ಪ ಪಾಟೀಲ, ಈಶ್ವರ ಪಾಟೀಲ, ಭೀಮಶಿ ಹಂದಿಗುಂದ,ಬಸು ಬೆಳಗಲಿ, ಮಹಾಂತೇಶ ಮಿಳ್ಳಿ, ಆರ್. ಕೆ. ಪಾಟೀಲ, ಸಿದ್ದು ಬಿ. ಗೌಡಪ್ಪನವರ, ರಾಮಪ್ಪಾ ಪಾಟೀಲ, ಸದಾಶಿವ ಪಾಟೀಲ, ಸುರೇಶ ಪಾಟೀಲ, ಪ್ರಭು ಗುಡ್ಡಾಕರ, ನಂದೆಪ್ಪ ಬೆಳಗಲಿ, ಅಪ್ಪು ಪಾಟೀಲ, ಸತ್ಯೆಪ್ಪಾ ಪಾಟೀಲ, ಪ್ರಶಾಂತ ಪಾಟೀಲ, ಮುದಕಪ್ಪ ಪಾಟೀಲ, ಗೂಳಪ್ಪಾ ಪಾಟೀಲ, ಧರೆಪ್ಪ ಮ. ಪಾಟೀಲ, ಜಿ. ಆರ್. ಹಂದಿಗುಂದ ಸೇರಿದಂತೆ ನೂರಾರು ಜನ ಮಹಿಳೆಯರು ಭಾಗವಹಿಸಿದ್ದರು.

## ಮಕ್ಕಳ ದಿನಾಚರಣೆ ಪ್ರಯುಕ್ತ ಉಮಾ ತಂಬ್ರಳ್ಳಿರಿಂದ ಶಾಲೆಗೆ ಆಟೋಪಕರಣ ವಿತರಣೆ



**ಕೊಪ್ಪಳ :** ನಗರದ ಸಿಪಿಎಸ್ ಶಾಲೆಯಲ್ಲಿ ಗುರುವಾರ ಮಕ್ಕಳ ದಿನಾಚರಣೆ ಪ್ರಯುಕ್ತ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ರವರು ಕ್ಲಬ್ಬಿ ನಿಂದ ದತ್ತು ಪಡೆದ ಶಾಲೆಯ ಮಕ್ಕಳಿಗೆ ಆಟೋಪಕರಣ ದೇಣಿಗೆಯಾಗಿವಿತರಣೆ ಮಾಡಿದರು

ಮಕ್ಕಳ ದಿನಾಚರಣೆ ಪ್ರಯುಕ್ತ ಮಕ್ಕಳ ದೈಹಿಕ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಆಟೋಪಕರಣದ ಸಾಮಾಗ್ರಿಗಳನ್ನು ದೇಣಿಗೆಯಾಗಿ ನೀಡಲಾಯಿತು ಆಟೋಪಕರಣ ಸಾಮಗ್ರಿಗಳಾದ 2 ಕೇರಂ ಬೋರ್ಡ್, ಎರಡು ಚೆಸ್ ಬೋರ್ಡ್ 2 ರಿಂಗ್ಸ್ ಮತ್ತು ಎರಡು ಜಂಪಿಂಗ್ ರೋಪ್ಸ್ ವಿತರಣೆ ಮಾಡಿ ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಇನ್ನರ್ವಿಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ, ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ ಉಪಾಧ್ಯಕ್ಷರಾದ ಮಧು ಶೆಟ್ಟರ್ ಐ ಎಸ್ ಓ ಮಧು ನಿಲೋಗಲ್ ಎಡಿಟರ್ ನಾಗವೇಣಿ ಮಾಜಿ ಅಧ್ಯಕ್ಷರಾದ ಶರಣಮ್ಮ ಪಾಟೀಲ್ ಸದಸ್ಯರಾದ ಹೇಮಾ ಬಳ್ಳಾರಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಗ್ರಾಪಂ ಉಪಾಧ್ಯಕ್ಷರಾಗಿ ಪದ್ಮಾವತಿ ಅವಿರೋಧ ಆಯ್ಕೆ



**ಮಹಾಲಿಂಗಪುರ :** ಸಮೀಪದ ಚಿಮ್ಮಡ ಗ್ರಾಮ ಪಂಚಾಯತಿ ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 3ನೇ ವಾರ್ಡ ಸದಸ್ಯೆ ಶ್ರೀಮತಿ ಪದ್ಮಾವತಿ ಪ್ರಭು ಭಜಂತ್ರಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸದಸ್ಯರ ನಡುವೆ ಮಾಡಿಕೊಂಡ ಒಪ್ಪಂದದಂತೆ ಗ್ರಾಮ ಪಂಚಾಯತಿಯ ಹಿಂದಿನ ಉಪಾಧ್ಯಕ್ಷರಾದ ಶ್ರೀಮತಿ ಪ್ರೇಮಾ ಪ್ರಭು ಗೋವಿಂದಗೋಳ ತಮ್ಮ ಸ್ಥಾನಗಳಿಗೆ ರಾಜಿನಾಮೆ ನೀಡಿದ ಪ್ರಯುಕ್ತ ತೆರವಾಗಿರುವ ಸ್ಥಾನಕ್ಕೆ ಚುನಾವಣೆ ಘೋಷಣೆಯಾಗಿತ್ತು. ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಮಹಿಳಾ ಅಭ್ಯರ್ಥಿಗೆ ಮೀಸಲಾಗಿದ್ದು,

ಕೇವಲ ಒಂದೇ ನಾಮಪತ್ರ ಸಲ್ಲಿಕೆಯಾದ್ದರಿಂದ ಶ್ರೀಮತಿ ಪದ್ಮಾವತಿ ಪ್ರಭು ಭಜಂತ್ರಿ ಅವರು ಚಿಮ್ಮಡ ಗ್ರಾಪಂ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ, ರಬಕವಿ-ಬನಹಟ್ಟಿ ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪಾ ಪಟ್ಟಿಹಾಳ ಘೋಷಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಪ್ರಭು ಪಾಲಭಾವಿ, ಪ್ರಕಾಶ ಪಾಟೀಲ, ಗುರಲಿಂಗಪ್ಪಾ ಪೂಜಾರಿ, ಅಶೋಕ ಮೋಟಗಿ, ಪ್ರಭು ಮುಧೋಳ, ಮನೋಜ ಹಟ್ಟಿ, ಪೈಗಂಬರ ಮೋಪಗಾರ, ರಮೇಶ ಮೇತ್ರಿ, ಮಹಾಂತೇಶ ಜಾಲಿಕಟ್ಟಿ, ಅವ್ವನ್ನಪ್ಪಾ ಮುಗಳಖೋಡ, ಕಾಳು ಬಡಿಗೇರ, ಪ್ರಭು ಗೋವಿಂದಗೋಳ, ಪ್ರಭು ಮುಗಳಖೋಡ, ಶಿವಾನಂದ ದಿನ್ನಿಮನಿ, ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದರ, ಮಹಿಳಾ ಸದಸ್ಯೆಯರು, ಬಿಜೆಪಿ ಮುಂಖಡರು ಇದ್ದರು.

# ನಿಸರ್ಗದಿಂದ ಬ್ರಹ್ಮಾಂಡ ಶಕ್ತಿ ಪ್ರವೇಶ: ನಿರಂಜನಶ್ರೀ

**ತಾಳಿಕೋಟೆ :** ದಿನನಿತ್ಯ ಮುಂಜಾನೆ ಏಳುವಾಗ ಸೂರ್ಯೋದಯ ನೋಡಿ ಸಾಯಂಕಾಲ ಸೂರ್ಯಸ್ತ ನೋಡಿ, ಹರಿಯುವ ನಧಿ ನೋಡಿ, ಆಕಾಶ ಅಷ್ಟೇ ಅಲ್ಲಾ ಆಕಾಶದಲ್ಲಿಯ ನಕ್ಷತ್ರನೋಡಿದರೆ ಮನಸ್ಸೆಂಬುದು ಸ್ವಚ್ಚವಾಗಿರುತ್ತದೆ ನಿಸರ್ಗವೆಂಬುದನ್ನು ನೋಡಿದರೆ ಮನದಲ್ಲಿಯೇ ಬ್ರಹ್ಮಾಂಡವೆಂಬ ಶಕ್ತಿ ಪ್ರವೇಶವಾಗುತ್ತದೆ ಎಂದು ಖ್ಯಾತ ಆದ್ಯಾತ್ಮೀಕ ಪ್ರವಚನಕಾರರಾದ ಪ.ಪೂ.ಶ್ರೀ ನಿರಂಜನ ಮಹಾ ಸ್ವಾಮಿಗಳು ನುಡಿದರು.

ಬುಧವಾರರಂದು ಯೋಗೋತ್ಸವ ಸಮಿತಿ ತಾಳಿಕೋಟೆ ಇವರ ವತಿಯಿಂದ ಸ್ಥಳೀಯ ಕನ್ನಡ ಶಾಲಾ ಮೈಧಾನದಲ್ಲಿ ಏರ್ಪಡಿಸಲಾದ ಸಾಮೂಹಿಕ ಭಜನೆ, ಹಾಗೂ ಆದ್ಯಾತ್ಮೀಕ ಪ್ರವಚನದ 2ನೇ ದಿನದಂದು ಮಾತನಾಡುತ್ತಿದ್ದ ಅವರು ನಿಸರ್ಗ ಮನಸ್ಸನ್ನು ಸ್ವಚ್ಚ ಮಾಡುತ್ತದೆ ಪತಂಜಲಿ ಅವರು ನಿಸರ್ಗ ನೋಡುತ್ತಲೇ ಆತ್ಮದ್ಯಾನಿಗಳಾಗಿದ್ದಾರೆಂದರು. ಅಕ್ಕಮಹಾದೇವಿ ಅವರು ವಿಜಯಪುರದ ಸಿದ್ದೇಶ್ವರ ಶ್ರೀಗಳಪ್ಪನವರು ನಿಸರ್ಗವನ್ನು ಪ್ರೀತಿಸುತ್ತಿದ್ದರೆಂದು ಹೇಳಿದ ಶ್ರೀಗಳು ಲಿಂಗ ಪೂಜೆಯನ್ನೂ ಸಹ ಮಾಡಬೇಕೆಂದರು.

ಪೂಜೆ ಮಾಡಿದರೆ ಅದರಲ್ಲಿ ಮಗ್ನರಾಗಬೇಕು ನಿಮ್ಮನ್ನು ನೀವು ಮರೆಯುವದಲ್ಲಾ ಎಲ್ಲವನ್ನು ಮರೆಯಬೇಕೆಂದರು, ಮಂತ್ರ ಜಪವೆಂಬುದು ಗುರು ಮಂತ್ರವಾಗಲಿ ಜಪ ಮಾಡಿಕೊಳ್ಳುತ್ತಿರುಬೇಕೆಂದು ಹೇಳಿದ ಶ್ರೀಗಳು ಯಾವಾಗಲೂ ಓಂ ನಮಃ ಶಿವಾಯ ಮಂತ್ರದ ಜಪದಿಂದ ಮನಸ್ಸು ಸ್ವಚ್ಚವಾಗಿರುತ್ತದೆ ಹಾಡುದರಿಂದಲೂ ಮನಸ್ಸು ಸ್ವಚ್ಚವಾಗಿರುತ್ತದೆ ದೇವರ ವಲುಮೆಯೂ ಆಗಲಿದೆ ಎಂದು ಪುಟ್ಟರಾಜ ಗವಾಯಿಗಳ ಹಾಗೂ ಮೀರಾಬಾಯಿ ಅವರನ್ನು ಉದಾರಿಸಿದ ಶ್ರೀಗಳು, ರೈತರ ಹಾಡುವ ಹಾಡು, ಜೋಗೂಳ ಪದಗಳು ಅಲ್ಲದೇ ಭಕ್ತಿ ಗೀತೆ ಭಜನಾ ಪದಗಳನ್ನು ಹಾಡುವದರಿಂದ ಮನಸ್ಸೆಂಬುದು ಸ್ವಚ್ಚವಾಗಿರುತ್ತದೆ ಎಂದರು.

ಬಸವಣ್ಣನವರೂಸಹಹೇಳಿದ್ದಾರೆಸಂಗೀತಗೊತ್ತಿಲ್ಲಾಬಂದಂತೆ



ಹಾಡುತ್ತೇನೆ ಎಂದಿದ್ದಾರೆ ಸಂಗೀತವೆಂಬುದು ಅನ್ಯರಿಂದ ಕಲಿಯಬೇಕಿಲ್ಲಾ ಬಂದಂತೆ ಹಾಡಿ ಆನಂದಮಯವಾಗಿರಿ ಎಂದರು. ಪ್ರಶಸ್ತಿಗಾಗಿ ಹಾಡುವದು ಬೇಡಾ ಭಗವಂತನಿಗಾಗಿ ಹಾಡಬೇಕು ಭಗವಂತ ನಾದ ಸಂಗೀತದಲ್ಲಿ ಭಕ್ತಿ ಇದ್ದರೆ ಭಗವಂತ ಸಾಕ್ಷಾತ್ಕಾರವಾಗುತ್ತಾನೆಂದರು. ದಿನಕ್ಕೊಂದು ತಾಸು ಮೌನವಾಗಿರಿ ಬಾಯಿಯಿಂದಲೂ ಮನಸ್ಸಿನಿಂದಲೂ ಮೌನವಾಗಿರಬೇಕು ಅಂದರೆ ಭಗವಂತನ ಸಾಕ್ಷಾತ್ಕಾರವಾಗುತ್ತದೆ ಮಾತಿನಿಂದ ಮೌನ, ಮನಸ್ಸಿನಿಂದ ಮೌನವಾಗಿರಬೇಕು 1 ಗಂಟೆಕಾಲವಾದರೂ ಇರಬೇಕೆಂದರು. ಮಾತನಾಡಿದರೆ ಅನಿವಾರ್ಯತೆ ಇದ್ದಾಗ ಮಾತನಾಡಿ ಅನಾವಶಕ ಮಾತನಾಡುವದು ಬೇಡಾ ವೆಂದು ಸತ್ಸಂಗದಿಂದ ಮನಸ್ಸು ಶುದ್ದವಾಗಿರುತ್ತದೆ ಎಂದು 7 ಸೂತ್ರಗಳನ್ನು ಭಕ್ತ ಸಮೂಹಕ್ಕೆ ತಿಳಿ ಹೇಳಿದ ಶ್ರೀಗಳು ಸತ್ಸಂಗದಿಂದ ಯಾವುದೇ ದುಶ್ಚಟಕ್ಕೆ ಒಳಗಾಗುವದಿಲ್ಲಾ ಭಜನೆ ಆದ್ಯಾತ್ಮೀಕ ಎನ್ನುವಂತಹ ನಶೆ ಮಾಡಿರಿ ಭಕ್ತಿ ಪರಮಾತ್ಮ ಅನ್ನುವಂತಹ ನಶೆದಿಂದ ಜೀವನ ಪಾವನವಾಗುತ್ತದೆ ಕಾರಣ ಸತ್ಸಂಗ ಅನ್ನುವಂತಹದ್ದನ್ನು ಬಿಡಬೇಡಿರಿ ಎಂದರು. ಮಹಾತ್ಮರ ಶರಣರ ಮಾತುಗಳನ್ನು ಕೇಳಿ ಅವರು ಬರೆದಂತಹ ಪುಸ್ತಕಗಳನ್ನು ಓದಿರಿ ಎಂದು ಸಿದ್ದೇಶ್ವರಶ್ರೀಗಳು ಬರೆದ ಸತ್ಸಂಗ ಎಂಬ ಪುಸ್ತಕವನ್ನು ಓದಿರಿ ಎಂದರು.

ಮನಸ್ಸು ಸ್ವಚ್ಚವಿದ್ದವ ಆನಂದವಾಗಿ ಬಧುಕುತ್ತಾನೆ ಮನಸ್ಸು ಸ್ವಚ್ಚವಾಗಿರಬೇಕಾದರೆ ಸತ್ಯದ ಹಾದಿಯಲ್ಲಿದ್ದವರ ಸಂಘ ಮಾಡಬೇಕು ಕಾರಣ ಭಾರತ ದೇಶದಲ್ಲಿ ಈ ಹಿಂದಿನಿಂದಲೂ 12ನೇ ಶತಮಾನದಲ್ಲಿಯೂ ಅನುಭವ ಮಂಟಪದಲ್ಲಿ ಸತ್ಸಂಗವೆಂಬುದು ನಡೆಯುತ್ತಿತ್ತು ಎಂದು ಅಂದಿನ ಇತಿಹಾಸ ವಿವರಿಸಿದ ಶ್ರೀಗಳು ಅಲ್ಲಮಪ್ರಭು ಬಸವಣ್ಣನವರ ಹಾಗೂ ಅಕ್ಕಮಹಾದೇವಿ ಅವರ 770 ಆತ್ಮ ದ್ಯಾನವನ್ನು ಕೊಡುತ್ತದೆ ಎಂಬುದರ ಕುರಿತು ಭಹು ಮಾರ್ಮಿಕವಾಗಿ ವಿವರಿಸಿದರು. ಬಧುಕು ಎಂಬುದು ಮನಸ್ಸಿನ ಮೇಲೆ ಅವಲಂಬಿಸಿದೆ ಮನಸ್ಸು ಎಂಬುದು ಶುದ್ದವಾಗಿದ್ದರೆ ಬಧುಕು ಎಂಬುದು ಶುದ್ದವಾಗಿರುತ್ತದೆ ಕಾಮ, ಕ್ರೋದ, ಮದ, ಮತ್ಸರ, ಇಂತವುಗಳು ಮನದಲ್ಲಿದ್ದರೆ ಜೀವನ ನರಕವಾಗುತ್ತದೆ ಕಾರಣ ಮನಸ್ಸೆಂಬುದನ್ನು ಸ್ವಚ್ಚವಾಗಿಟ್ಟುಕೊಳ್ಳಿರಿ ಎಂದರು. ಶರೀರಕ್ಕೆ ಕೊಟ್ಟಂತಹ ಮಹತ್ವವನ್ನು ಮನಸ್ಸಿಗೆ ಕೊಡಬೇಕು ಶರಣರು ಹೇಳಿದಂತೆ ಧರ್ಮ ಸಾಧನೆಗೆ ಮನಸ್ಸು ಇಂದ್ರಿಗಳು ಚೆನ್ನಾಗಿರಬೇಕು ಮನಸ್ಸೆಂಬುದು ಚಾಲಕನಿದ್ದಂತೆ ಅದು ಮನೆಯ ಒಡೆಯನಿದ್ದಂತೆ ಅದು ಸ್ವಚ್ಚವಾಗಿದ್ದರೆ ಅದು ಸರಿಯಾಗಿ ಎಚ್ಚೆತ್ತುಕೊಂಡಿದ್ದರೆ ಇಡೀ ಮನಸ್ಸೆಂಬ ಮನೆತನವೇ ಸ್ವಚ್ಚವಾಗಿರುತ್ತದೆ ಎಂದರು. ಜಗತ್ತೆಂಬುದು ಸ್ವಚ್ಚವಿದೆ ಮನಸ್ಸು ಸ್ವಚ್ಚವಿರದಿದ್ದರೆ ಜಗತ್ತು ಹೊಲಸಾಗಿರುತ್ತದೆ ಮನಸ್ಸು ಸ್ವಚ್ಚವಾಗಿ ಇದ್ದವ ಜೀವನದಲ್ಲಿ ಆನಂದವಾಗಿ ಬಧುಕುತ್ತಾನೆ ಕಾರಣ ಸತ್ಸಂಗವನ್ನು ಮಾಡಬೇಕೆಂದು ಶ್ರೀಗಳು ತಾಳಿಕೋಟೆ ಪಟ್ಟಣದಲ್ಲಿ ನಿಜಗುಣ ಶಿವಯೋಗಿಗಳ ಆಶ್ರಮದಲ್ಲಿ ದಿನನಿತ್ಯ ನಡೆಯುತ್ತಿರುವ ಸತ್ಸಂಗದಲ್ಲಿ ಭಾಗಿಯಾಗುತ್ತಿರುವ ಭಕ್ತಾಧಿಗಳ ಸೇವಾ ಕಾರ್ಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಮಯದಲ್ಲಿ ಅಸಂಖ್ಯಾತ ಭಕ್ತಸಮೂಹವು ಹಾಗೂ ಯೋಗೋತ್ಸವ ಸಮಿತಿಯ ಪದಾಧಿಕಾರಿಗಳು, ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

# ರನ್ನಬೆಳಗಲಿ ಬಂದ ಲಕ್ಷ್ಮೀದೇವಿಯ 12ನೇ ವರ್ಷದ ಲಕ್ಷದೀಪೋತ್ಸವ



**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿ ಪಟ್ಟಣದ ಬಂದಲಕ್ಷ್ಮೀ ದೇವಿಯ 12ನೇ ವರ್ಷದ ಲಕ್ಷದೀಪೋತ್ಸವ ಸಮಾರಂಭವು ಸಾವಿರಾರು ಭಕ್ತರ ಮಧ್ಯೆ ಲಕ್ಷ ದೀಪೋತ್ಸವ ಸಮಾರಂಭ ಜರುಗಿತು.

ಇತ್ತೀಚಿಗೆ ಧಾರವಾಡ ಕರ್ನಾಟಕ ವಿವಿಯಿಂದ ಗೌರವ ಡಾಕ್ಟರೇಟ್ ಪುರಸ್ಕೃತರಾದ ಮರೆಗುದ್ದಿಯ ಪಡಾ. ನಿರುಪಾದೀಶ್ವರ ಮಹಾಸ್ವಾಮಿಗಳು, ಸುವರ್ಣ ಕರ್ನಾಟಕ ಸಾಧಕರು ಪ್ರಶಸ್ತಿ ಪುರಸ್ಕೃತ ಬಂಡಿಗಣಿ ಅನ್ನದಾನೇಶ್ವರ ಸ್ವಾಮಿಜಿ, ಬಾಗಲಕೋಟೆ ಜಿಲ್ಲಾಧಿಕಾರಿ ಶ್ರೀಮತಿ ಕೆ. ಎಮ್. ಜಾನಕಿ ಅವರಿಗೆ ಪೂಜ್ಯರಿಗೆ ರನ್ನಬೆಳಗಲಿಯ ಗುರುಹಿರಿಯರು ಸನ್ಮಾನಿಸಿ ಗೌರವಿಸಿದರು.

ಲಕ್ಷ ದೀಪೋತ್ಸವ ವಾರ್ಷಿಕೋತ್ಸವ ನಿಮಿತ್ಯ ಅಸಂಖ್ಯಾತ ಸಂಖ್ಯೆಯಲ್ಲಿ ಆಗಮಿಸಿದ ಭಕ್ತರು ದೇವಿಯ ವಿಶೇಷ ಪೂಜೆ, ದರ್ಶನ ಮಾಡಿ ಮಹಾಪ್ರಸಾದ ಸ್ವೀಕರಿಸಿದರು.

ಬೆಳಗಲಿನಾಡಿಗೆ ಹೊನ್ನ ಮಳೆ ಸುರಿಸಿದ ಬಂದಲಕ್ಷ್ಮೀದೇವಿ ತಮ್ಮ ಕಷ್ಟಗಳೆಲ್ಲ ಕಳೆದು ಸೌಭಾಗ್ಯದ ಮಳೆ ಸುರಿಯಲೆಂದು. ಭಕ್ತಿ ಭಾವ ದಿಂದ ನಮಸ್ಕರಿಸಿ ಜಯ ಘೋಷಗಳ ಜೊತೆಗೆ ರಂಗೋಲಿಯ ಚಿತ್ತಾರಗಳಲ್ಲಿ, ದೇವಸ್ಥಾನದ ಜಗಲಿಗಳ ಮೇಲೆ, ದೇವಸ್ಥಾನದ ಅಂಗಳಗಳಲ್ಲಿ ದೀಪ ಬೆಳಗಿಸಿ ಭಕ್ತಿಯ ಸುಧೆಯಲ್ಲಿ ಮಿಂದೆದ್ದರು. ದೇವಸ್ಥಾನದ ಹಿರಿಯರು, ಗ್ರಾಮದ ಹಿರಿಯರು, ಸೇವಕರು, ಅರ್ಚಕರು ಸೇರಿದಂತೆ ಹಲವರು ಇದ್ದರು.

# ಒನಕೆ ಓಬವ್ವ ಜಯಂತಿ ಆಚರಣೆ



**ಮಹಾಲಿಂಗಪುರ :** ರನ್ನಬೆಳಗಲಿ ಸರ್ಕಾರಿ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವೀರ ವನತೆ ಒನಕೆ ಓಬವ್ವ ಜಯಂತಿಯ ಆಚರಿಸಲಾಯಿತು. ಮುಖ್ಯಗುರುಮಾತೆ ಎಸ್.ಪಿ.ಜೋಶಿ ಸೇರಿದಂತೆ ಶಿಕ್ಷಕಿಯರು, ವಿದ್ಯಾರ್ಥಿಗಳು ಇದ್ದರು.

# ವಿದ್ಯೇ ಜ್ಞಾನ ರೂಪದಲ್ಲಿರುತ್ತದೆ, ಸಂಸ್ಕೃತಿ ಕ್ರಿಯಾ ರೂಪದಲ್ಲಿರುತ್ತದೆ: ಡಾ. ಶ್ರೀ ಮಲಯ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು



**ನೆಲಮಂಗಲ :** 'ಮನೆಯಲ್ಲಿ ತೊಂದರೆ ಇದೆ, ಬಡತನ ಇದೆ ಎಂಬ ಕಾರಣಕ್ಕಾಗಿ ಯಾರೂ ಅಕ್ಷರದಿಂದ ವಂಚಿತವಾಗಬಾರದು ಎಂಬುದು ಶ್ರೀ ಶಿವಕುಮಾರ ಸ್ವಾಮೀಜಿಗಳ ಕಾಳಜಿಯಾಗಿತ್ತು. ಸಂಪತ್ತನ್ನು ಯಾವಾಗಬೇಕಾದರೂ ಗಳಿಸಬಹುದು. ಆದರೆ ವಿದ್ಯೆಯನ್ನು ಒಂದು ಸಮಯದಲ್ಲಿ ಮಾತ್ರ ಗಳಿಸಲು ಸಾಧ್ಯ. ಆದ್ದರಿಂದ ಎಲ್ಲರೂ ವಿದ್ಯಾರ್ಥಿ ಅವಸ್ಥೆಯಲ್ಲಿ ಅಕ್ಷರ ಸಂಪತ್ತನ್ನು ಗಳಿಸಬೇಕು. ಕ್ಷರ ಎಂದರೆ ನಾಶವಾಗುವಂಥದ್ದು. ಅಕ್ಷರ ಎಂದರೇ ನಾಶವಾಗದೆ ಇರುವಂತದ್ದು. ಹಣ, ಬಂಗಾರ, ಆಸ್ತಿಗಳೆಲ್ಲ ಕ್ಷರ ಸಂಪತ್ತು. ಇದನ್ನು ಯಾರು ಬೇಕಾದರೂ ಕಸಿಯಬಹುದು. ಆದರೆ ವಿದ್ಯೆ ಮತ್ತು ಜ್ಞಾನವನ್ನು ಯಾರಿಂದಲೂ ಕಸಿಯಲು ಸಾಧ್ಯವಿಲ್ಲ. ವಿದ್ಯೇ, ಜ್ಞಾನ ರೂಪದಲ್ಲಿರುತ್ತದೆ, ಸಂಸ್ಕೃತಿ, ಕ್ರಿಯಾ ರೂಪದಲ್ಲಿರುತ್ತದೆ. ನೀವು ಓದಿದ್ದೆಲ್ಲವನ್ನು ಕಾರ್ಯರೂಪಕ್ಕೆ ತರಬೇಕೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಮಾಡಬೇಕು' ಎಂದು ಶಿವಗಂಗೆ ಮೇಲಣ ಗವಿ ಮಠದ ಡಾ. ಶ್ರೀ ಮಲಯ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ತಿಳಿಸಿದರು.

ಅವರು ಶ್ರೀ ಸಿದ್ದಗಂಗಾ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ, 2024 – 25 ನೇ ಸಾಲಿನ ಎನ್ಎಸ್ಎಸ್, ಎನ್ ಸಿ ಸಿ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ದಿವ್ಯಸಾನಿಧ್ಯ ವಹಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಲೇಖಕ ಚಿಂತಕ ಅಂಕಣಕಾರ ಮಣ್ಣೆ ಮೋಹನ್ ರವರು ಮಾತನಾಡಿ 'ಬ್ರಿಟಿಷರು ಗೆಲಿಲಿಯೋ, ಕೋಪರ್ನಿಕಸ್, ನ್ಯೂಟನ್, ಐನ್ ಸ್ಟೈನ್, ಆರ್ಕಿಮಿಡಿಸ್– ಇಂತಹ ವಿದೇಶಿ ವಿಜ್ಞಾನಿಗಳ ಕೊಡುಗೆಯನ್ನು ಮಾತ್ರ ಪಠ್ಯಪುಸ್ತಕದಲ್ಲಿ ತುಂಬಿ, ನಮ್ಮ ದೇಶದ ಹೆಮ್ಮೆಯ ಆರ್ಯಭಟ, ವರಹಮಿಹಿರ, ಭಾಸ್ಕರಾ, ಭಾಸ್ಕರಾಚಾರ್ಯರಂತಹ ಶ್ರೇಷ್ಠ ಖಗೋಳ ಶಾಸ್ತ್ರಜ್ಞರನ್ನು, ಗಣಿತಜ್ಞರನ್ನು ಮೂಲೆಗೆ ತಳ್ಳಿದರು. ವಿಶ್ವದ ವೈದ್ಯಕೀಯ ರಂಗಕ್ಕೆ ಆ ಕಾಲದಲ್ಲಿಯೇ ಹೊಸ ಬಾಷ್ಯ ಬರೆದ ಚರಕ, ಶುಶ್ರುಷ ಇವರೆಲ್ಲರನ್ನು ಕಡೆಗಣಿಸಿದರು. ಜಗತ್ತಿನ ವಿವಿಧ ಭಾಗಗಳಿಂದ ಅಧ್ಯಯನಕೆಂದು ಬಂದಿದ್ದ ಹತ್ತು ಸಾವಿರ ಜನರಿಗೆ ಊಟ ಮತ್ತು ವಸತಿಯ ಸೌಲಭ್ಯವನ್ನು ಒದಗಿಸಿದ್ದ ನಳಂದ, ತಕ್ಷಶಿಲಾಗಳಂತಹ ವಿಶ್ವವಿದ್ಯಾನಿಲಯಗಳು ಆ ಕಾಲದಲ್ಲೇ ಜ್ಞಾನದ ಕೇಂದ್ರಗಳಾಗಿದ್ದವು. ನೀವೆಲ್ಲರೂ ಎಲ್ಲೋ ಒಂದು ಕಡೆ ಕೆಲಸಕ್ಕೆ ಸೇರಿ, ಅವರು ಕೊಡುವ ಸಂಬಳದಲ್ಲಿ ಜೀವನ ಮಾಡುವುದಕ್ಕಿಂತ, ಸ್ವಯಂ ಉದ್ಯೋಗಿಗಳಾಗಿ, ಅನೇಕ ಜನರಿಗೆ ಉದ್ಯೋಗ ನೀಡಿ, ನವ ಭಾರತವನ್ನು ಕಟ್ಟಿ. ಮತ್ತೆ ಭಾರತವನ್ನು ವಿಶ್ವಗುರುವನ್ನಾಗಿಸಲು ಕೈಜೋಡಿಸಿ' ಎಂದರು.

ಕಾಲೇಜು ಪ್ರಾಂಶುಪಾಲರಾದ ಡಾ ಕೆ ಎನ್ ಅಮರೇಂದ್ರ ರವರು ಮಾತನಾಡಿ 'ಶಿಕ್ಷಣ, ಸೃಜನಶೀಲತೆ, ಮಾನವೀಯ ಮೌಲ್ಯಗಳು – ಈ ಮೂರು ಇದ್ದಾಗ ಮಾತ್ರ ಮಾನವನ ಜೀವನ ಸಾರ್ಥಕ. ಇಂದು ಮನುಷ್ಯನಿಗೆ ಆಚಾರ ವಿಚಾರ, ಸಂಸ್ಕಾರ, ಸಂಸ್ಕೃತಿಗಳ ಕೊರತೆ ಇದೆ. ನೀವುಗಳು ಅವುಗಳನ್ನು ಮೈಗೂಡಿಸಿಕೊಳ್ಳಬೇಕು. ಮುಂದೆ ನೀವು ನಿಮ್ಮ ದುಡಿಮೆಯಲ್ಲಿ 10% ಹಣವನ್ನು ಪುಸ್ತಕ ಕೊಂಡುಕೊಳ್ಳಲು ಬಳಸಿ. ರತನ್ ಟಾಟಾ ರವರ ಆದರ್ಶವನ್ನು ಮೈಗೂಡಿಸಿಕೊಳ್ಳಿ. ಶೈಕ್ಷಣಿಕ ಶ್ರೇಷ್ಠತೆ, ವ್ಯಕ್ತಿತ್ವ ವಿಕಸನ, ಸಾಮಾಜಿಕ ಜವಾಬ್ದಾರಿ ಮತ್ತು ಸಮಗ್ರ ಬೆಳವಣಿಗೆ ನಮ್ಮ ಕಾಲೇಜಿನ ಧ್ಯೇಯವಾಗಿದೆ' ಎಂದರು.

ಕು. ಮೇಘ ಮತ್ತು ಸಂಗಡಿಗರಿಂದ ಪ್ರಾರ್ಥನೆ ನೆರವೇರಿತು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ವಿಜಯದುಗ್ಗಪ್ಪನವರು ಸ್ವಾಗತ ಕೋರಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಕೋಮಲ ರವರು ಶಾಲೆಯ ಪಠ್ಯ ಮತ್ತು ಪಠ್ಯತರ ಚಟುವಟಿಕೆಗಳ ಪಕ್ಷಿನೋಟ ನೀಡಿದರು. ಎನ್ಎಸ್ಎಸ್ ಅಧಿಕಾರಿಗಳು, ಪ್ರಾಧ್ಯಾಪಕರು ಮತ್ತು ಚಿಂತಕರಾದ ಡಾ. ಗಂಗರಾಜುರವರು ಕಾರ್ಯಕ್ರಮವನ್ನು ನಿರೂಪಿಸಿದರು.

**ವರದಿ:**
**ಮಣ್ಣೆ ಮೋಹನ್**

# ಕೊಪ್ಪಳದಲ್ಲಿ ಆಕರ್ಷಿತ ಮೆರವಣಿಗೆ ಭಾರಿ ಜನಸಾಗರ ಎಲ್ಲಿ ನೋಡಿದರೂ ಜನವೇ ಜನ




**ಕೊಪ್ಪಳ :** ಭಾರತ ಕಂಡ ವಿವಿಧ ಸ್ವಾತಂತ್ರ್ಯ ಹೋರಾಟಗಾರರ ಜಯತ್ಯೋತ್ಸವ ಸಮಾರಂಭ ಶನಿವಾರ ನಗರದ ಸಾಹಿತ್ಯ ಭವನದಲ್ಲಿ ಜರುಗಿ ಬಳಿಕ ಮುಸ್ಲಿಂ ಯುವ ಸಮಿತಿ ಏರ್ಪಡಿಸಿದ ಭವ್ಯ ಮೆರವಣಿಗೆ ನಗರದ ನಗರಸಭೆ ಬಳಿ ಇರುವ ಈದ್ಗ ಮೈದಾನದಿಂದ ಅಶೋಕ್ ಸರ್ಕಲ್ ಮಾರ್ಗವಾಗಿ ಪ್ರಮುಖ ಜವಾನ್ ರಸ್ತೆಯಲ್ಲಿ ಸಂಚರಿಸಿ ರಾಜ ಸವಾಲ್ ದರ್ಗಾದ ವರೆಗೆ ನಡೆದ ಭವ್ಯ ಮೆರವಣಿಗೆ ಆಕರ್ಷಿತವಾಗಿತ್ತು ಭಾರಿ ಜನಸಾಗರ ಇದರಲ್ಲಿ ಪಾಲ್ ಗೊಂಡಿತು ಸುಮಾರು 20 ಸಾವಿರಕ್ಕೂ ಅಧಿಕ ಜನಸಂಖ್ಯೆ ವಿಶೇಷವಾಗಿ ಯುವಕರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು,

ಕೊಪ್ಪಳ ನಗರ ತುಂಬ ಎಲ್ಲಡೆ ಬರೇ ಜನ ಕಾಣುತ್ತಿತ್ತು ನಿಂತಲ್ಲಿ ಕುಂತಲ್ಲಿ ಎಲ್ಲೆ ಜನಸಂದರನನೆ ಕಂಡು ಬರುತ್ತಿತ್ತು ಮುಸ್ಲಿಂ ಸಮಾಜದ ಹಿರಿಯರ ಮಾರ್ಗದರ್ಶನದಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಿದ ಮುಸ್ಲಿಂ ಯುವಕರು ಶಾಂತಿಯುತವಾಗಿ ವಿಜೃಂಭಣೆಯಿಂದ ಯಶಸ್ವಿಯಾಗಿ ಮತ್ತು ಅರ್ಥಪೂರ್ಣವಾಗಿ ಮೆರವಣಿಗೆ ನಡೆಸಿ ಕುಣಿದು ಕುಪ್ಪಳಿಸಿದರು ಸಂಜೆ ಸುಮಾರು 5–30 ಕೆ ಪ್ರಾರಂಭಗೊಂಡ ಭವ್ಯ ಮೆರವಣಿಗೆ ರಾತ್ರಿ ಸುಮಾರು 12:30 ಗಂಟೆಗೆ ಮುಕ್ತಾಯಗೊಂಡಿತು, ಜಿಲ್ಲಾ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಮಾಡಿದ್ದರು, ಕೊಪ್ಪಳ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎಂಟು ವಿಧಾನಸಭಾ ಕ್ಷೇತ್ರದಿಂದ ಸಮಾಜ ಬಾಂಧವರು ಯುವಕರು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಕಾರ್ಯಕರ್ತರು ಮತ್ತು ಅಭಿಮಾನಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡುವಿಶೇಷ ಮೆರಗು ನೀಡಿದರು, ಜಯಂತ್ಯೋತ್ಸವ ಕಾರ್ಯಕ್ರಮ ಹಾಗೂ ಮೆರವಣಿಗೆ ಕಾರ್ಯಕ್ರಮ ಯಶಸ್ವಿಗೊಳಿಸಿರುವ ದಕ್ಕೆ ಕಾರ್ಯಕ್ರಮ ಸಂಘಟಕರಾದ ಮುಸ್ಲಿಂ ಯುವ ಸಮಿತಿಯ ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಕಾಲಿಗೆ ಮೀನಿನ ಬಲೆ ಸಿಲುಕಿ ಮೀನುಗಾರ ಸಾವು



**ರಬಕವಿ :** ಸಮೀಪದ ಜಾಕವೆಲ್ ಕಡೆಗೆ ಹೋಗುವ ರಸ್ತೆಗೆ ಹೊಂದಿಕೊಂಡಿರುವ ಬಾಳು ಪೂಜಾರಿಯವರ ಜಮೀನಿನ ಹತ್ತಿರದ ಕೃಷ್ಣಾ ನದಿಯಲ್ಲಿ ಸ್ವತಃ ತಾನೇ ಹಾಕಿದ ಮೀನಿನ ಬಲೆಯು ಕಾಲಿಗೆ ಸಿಲುಕಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಘಟನೆ ನಡೆದಿದೆ.

ರಬಕವಿ ದಾಸರಮಡ್ಡಿಯ ಸೋಮಲಿಂಗ ಪಂಡಿತ ಇಮ್ಮಡಿ (52) ಸಾವನ್ನಪಿದ ವ್ಯಕ್ತಿಯಾಗಿದ್ದು, ಶವವನ್ನು ನುರಿತ ಈಜುಗಾರರ ತಂಡದಿಂದ ನದಿಯಿಂದ ಹೊರ ತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಕೃಷ್ಣಾ ನದಿಯ ಹಿನ್ನೀರಿನಲ್ಲಿ ಕಳೆದ ರವಿವಾರದಂದು ಮೀನು ಹಿಡಿಯಲು ತಾನೇ ಹಾಕಿದ್ದ ಮೀನಿನ ಡಿಸ್ಕೋ ಬಲೆಗೆ ಆಕಸ್ಮಿಕವಾಗಿ ಸಿಲುಕಿಕೊಂಡು ಬಿಡಿಸಿಕೊಳ್ಳಲು ಸಾಧ್ಯವಾಗದೆ ಬೆಳಿಗ್ಗೆ 10 ರಿಂದ ಸಂಜೆ 4–30 ರೊಳಗಿನ ಸಮಯದಲ್ಲಿ ನೀರಿನಲ್ಲಿ ಮುಳುಗಿ ಮರಣ ಹೊಂದಿದ್ದಾನೆಂದು ಆತನ ತಂದೆ ಪಂಡಿತ ಇಮ್ಮಡಿ ಪೊಲೀಸರಿಗೆ ತಿಳಿಸಿದ್ದಾನೆ.

ಕಂದಾಯ, ಪೊಲೀಸ್ ಹಾಗು ಅಗ್ನಿ ಶಾಮಕ ತಂಡದವರ ಜಂಟಿ ಕಾರ್ಯಾಚರಣೆಯೊಂದಿಗೆ ಶವ ಹೊರತೆಗೆಯುವಲ್ಲಿ ಯಶಸ್ವಿಯಾಯಿತು.

# ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ ವಿತರಣೆ

**ಕೊಪ್ಪಳ :** ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ (ಬಿ.ಪಿ.ಎಲ್) ನೀಡಲು ಆದೇಶಿಸಿದ್ದು, ಆದ್ಯತಾ ಪಡಿತರ ಚೀಟಿ ಹೊಂದಲು ಅರ್ಹ ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ ನೀಡುವ ಕಾರ್ಯ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭವಾಗಿರುತ್ತದೆ.

ಆದ್ದರಿಂದ ಆದ್ಯತಾ ಪಡಿತರ ಚೀಟಿ ಹೊಂದಿಲ್ಲದ ಇ–ಶ್ರಮ್ ನೋಂದಾಯಿತ ಎಲ್ಲಾ ಅರ್ಹ ಕಾರ್ಮಿಕರು ನಿಮ್ಮ ಹತ್ತಿರದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯನ್ನು ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ದೂರವಾಣಿ ಸಂಖ್ಯೆ:1800–425–9339 ಅಥವಾ ಸಹಾಯವಾಣಿ 1967ಕ್ಕೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆವಿಗೂ ಸಂಪರ್ಕಿಸುವಂತೆ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State